The Hon'ble Sri K. CHENGALARAYA REDDY.—Very good Sir. I was just saying that if only Hon'ble Members opposite had taken the trouble to study the various kinds of literature placed in their hands from time to time and at the time of the Session of the House, they would have readily known how much of it was in the nature of advance recoverable and I am sure they would have modified their opinion. For example, under 'Advances and Loans' I might say that money is asked for purchase of silk to the extent of Rs. 25,00,000 or so. It is a temporary sort of payment. It is in the nature of a short term advance. We make the advance, we acquire the silk, send the stuff and get back the amount perhaps with some profit.

Sri G. A. ACHARYA.—Real profit we get back with interest.

The Hon'ble Sri K. CHENGALARAYA REDDY.—When we are preparing

Budget Estimates we always provide for some amount of closing balance. If we do not spend the entire amount for which we had budgetted, surely to that extent our closing balance stands increased. For example, under one or two items you will see that all the money budgetted could not be saved and the amounts lapsed, so that the closing balance mounted up. For some of those items, we are asking for grant now and naturally the money will be drawn from the closing balance of last year. If only the Hon'ble Members exercise their mind and think for two minutes before they make their remarks, I may say it would be better for themselves and it would be better for the House also.

I do not think, Sir, that I need say more than this just at present. The main purpose for which I am moving the present motion is for expenditure connected with elections. Sir, at the time of the preparation of the Budget Estimates we did not know as to when exactly the elections would be held. What we had provided in the Budget was something in the nature of a token grant indicating only the items of expenditure that are likely to come up in the course of the year. It was not easy at that time to gauge the exact amount required for the purpose of elections. I think the Hon'ble Members in the opposition benches are aware of the amount of that token grant. We had just provided for a small sum of two lakhs. We had yet to get the electoral rolls printed, we had to negotiate with the Election Commissioner and the Government of India as to what portion of the expenditure is to be met by the Government of India and what portion we had to meet. We were negotiating for a considerable length of time and urging that the Government of India should bear the entire expenditure. Then we negotiated that they should meet three-fourths of the expenditure allowing us to meet only one-fourth of it. Ultimately it has been decided that they will bear 50 per cent of the expenditure and we have to bear the other 50 per cent because elections would be both for the House of the People and for the Local Legislature.

So, the expenditure in connection with the printing of electoral rolls will come to about Rs. 8 lakhs and the actual expenditure in connection with the elections will come to about Rs. 12 lakhs.

Sri L. SIDDAPPA.—Democracy is a costly thing!

The Hon'ble Sri K. CHENGALARAYA REDDY.—Yes, democracy is a costly thing and adult franchise is a luxury as some one has said. It is all in the game of democracy.

The President of the Republic has stated that we are going to have elections by the end of November or early in December this year.

Rajamantrapravina H. B. GUNDAPPA GOWDA (Hassan District—General).—Provided the international situation.....

The Hon'ble Sri K. CHENGALARAYA REDDY. We can plan but the plans of men and mice are subjected to vicissitudes. We cannot help it.

As at present, the elections have to be held at the end of November or in December this year and the House will be gratified to know that within a very short time we have succeeded in printing electoral rolls on the basis of adult franchise and the lists are ready and Rs. 8 lakhs have to be spent for that purpose. Once again may I say that we have not actually paid out this sum. It has been paid as an advance to the printers who took trouble to print these lists at considerable inconvenience, pressure of time and so on. We are waiting for this Hon'ble House to set its seal of approval so that we may pay for the services rendered. I hope there will not be any dissentient voice in passing the demand I have the honour to place before the House.

Mr. SPEAKER.—Motion moved:

"That a supplementary sum not exceeding Rs. 8,17,400 be granted to the Government to defray the charges which will come in course of payment during the year ending 31st day of March 1951, in respect of 'General Administration'."

Sri M. Madiah has got a cut motion. Is the Hon'ble Member moving it?

Sri M. MADIAH.—Yes.

Mr. SPEAKER.—We shall continue after lunch.

Extension of time for receipt of candidature applications for elections to Estimates Committee and Standing Committees.

ಅಧ್ಯಕ್ಷರು (ಮಾನ್ಯ ಶ್ರೀ ಎ. ವೆಂಕಟಪ್ಪನವರು).—ಜುನಾವಣೆಯ ಸಂಬಂಧದಲ್ಲಿ ನಾಮಿನೇಷನ್ ಪೇಪರ್ಸ್‌ನ್ನು ಈ ದಿನ ಸಾಯಂಕಾಲ 5 ಘಂಟೆ ಒಳಗೆ ಕೊಡಬಹುದು ಎಂದು ನೂಚನೆ ಕೊಡಲಾಗಿತ್ತು. ಕೆಲವು ಸದಸ್ಯರು ಊರಿನಲ್ಲಿಲ್ಲವೆಂದು ಗೊತ್ತಾಗಿರುವುದರಿಂದ ನಾಮಿನೇಷನ್ ಪೇಪರ್ಸ್ ಕೊಡುವ ಕಾಲವನ್ನು ನಾಳೆಯವರೆಗೆ ಒಂದು ಘಂಟೆಯ ವರೆಗೆ ಹೆಚ್ಚಿಸಲಾಗಿದೆ.

The House will now rise for lunch and meet again at 5-35 P.M.

The Assembly adjourned for Lunch at Five Minutes past Five of the Clock and reassembled at Thirty-five Minutes past Five of the Clock, Mr. Chairman (Sri S. Rangaramiah) in the Chair.

(Sri M. Madiah's name was called and he was not present.)

Mr. Chairman (Sri S. Rangaramiah).—As Sri M. Madiah is not present, Sri L. Siddappa may move his cut motion.

Procedure for inclusion of fresh names of Voters in the Voters List.

Sri L. SIDDAPPA (Shimoga District—General).—Sir, I beg to move :

"That the demand under the Head "12.—General Administration' for Rs. 8,17,400 be reduced by Re. 1 (to discuss the procedure laid down for the inclusion of fresh names of voters in the voters' list.)".

ಸ್ವಾಮಿ, ನನ್ನ ಶೋತಾ ನಿರ್ಣಯದಲ್ಲಿ ನಮೂದಿಸಿರುವಹಾಗೆ ಈ ಪೊಲಿಗನ್ನು ಖರ್ಚುಮಾಡುವ ವಿಚಾರದಲ್ಲಿ ನನ್ನ ಆಕ್ಷೇಪಣೆ ಏನೂ ಇಲ್ಲ. ಈಗಿರತಕ್ಕ ಓಟರುಗಳ ಪಟ್ಟಿಯಲ್ಲಿ ಬಿಟ್ಟುಹೋಗಿರತಕ್ಕ ಹೆಸರುಗಳನ್ನು ಹೊಸದಾಗಿ ಸೇರಿಸಿಕೊಳ್ಳುವುದಕ್ಕೆ ಸರ್ಕಾರದವರು ಯಾವ ನಿಯಮವನ್ನು ಮಾಡಿದ್ದೀರಿ ಎಂಬ ವಿಷಯ ಚರ್ಚೆಮಾಡುವಬಗ್ಗೆ ಈ ಶೋತಾ ನಿರ್ಣಯವನ್ನು ಮಂಡಿಸುತ್ತಾ ಇದ್ದೇನೆ. ಇಲ್ಲಿಗೆ ಬಂದಮೇಲೆ ನನ್ನ ಕೈಗೆ ಎರಡು ಪ್ರೆಸ್ ಪತ್ರಿಕೆಗಳು ಸಿಕ್ಕಿವೆ. ಅದರಲ್ಲಿ ನಮೂದಿಸಿರುವುದು ಏನೆಂದರೆ.—ಒಂದೊಂದು ಸಬ್ ಡಿವಿಜ್ಞ್ ಒಂದೊಂದು ಎಲೆಕ್ಟರಲ್ ಯೂನಿಟ್ ಎಂತಲೂ, ಆ ಎಲೆಕ್ಟರಲ್ ಯೂನಿಟ್‌ಗೆ ಸಬ್‌ಡಿವಿಜ್ಞ್ ಆಫೀಸರು ರಿಜಿಸ್ಟರಿಂಗ್ ಅಥಾರಿಟಿ ಎಂದು ನೇಮಕ ಮಾಡಿರುವ ಹಾಗೂ ಮತ್ತು ಯಾರ್ಯಾರ ಹೆಸರು ಬಿಟ್ಟುಹೋಗಿದೆಯೋ ಅವರು ಆ ಬಗ್ಗೆ ನಮೂದಿಸಿರತಕ್ಕ ಒಂದು ಫಾರಂನಲ್ಲಿ ಅರ್ಜಿಯನ್ನು ಪ್ರತ್ಯೇಕವಾಗಿ ಹಾಕಿಕೊಳ್ಳಬೇಕೆಂತಲೂ, ಅಂಥ ಅರ್ಜಿಗಳನ್ನು ನೇರವಾಗಿ ರಿವೈಸಿಂಗ್ ಅಥಾರಿಟಿಗೆ ಆಗಲಿ, ರಿಜಿಸ್ಟರಿಂಗ್ ಅಥಾರಿಟಿಗೆ ಆಗಲಿ ಅಥವಾ ತಾಲ್ಲೂಕು ಅಮಲ್ದಾರರಿಗೆ ಆಗಲೇ ಒಂದು ನಿಯಮಿತ ತಾರೀಖಿನ ಒಳಗೆ ತಲುಪಿಸಬೇಕೆಂದೂ ಇದೆ. ಇದರಲ್ಲಿ ಮೂರು ನಾಮ್ಯ ಅಂಶಗಳ ಬಗ್ಗೆ ನನಗಿರುವ ಸಂಶಯಗಳನ್ನು ನಿವಾರಿಸಿಕೊಳ್ಳಬೇಕೆಂದು ನಾನು ಶೋತಾನಿರ್ಣಯವನ್ನು ತಂದಿದ್ದೇನೆ ಪ್ರೆಸ್ ನೋಟ್‌ನಲ್ಲಿ ಈ ರೀತಿ ಹೇಳಿದೆ,

"The address and house number given in the second entry of each roll relates to the Census House number, and persons who claim to be included in the rolls will have to furnish clear particulars of the Census House Number and name of the street, etc., in the application."

ಇದರ ವಿಚಾರದಲ್ಲಿ ಈಗ ಬಂದಿರುವ ತೊಂದರೆಯೇನೆಂದರೆ, ಈ ಪ್ರೆಸ್ ನೋಟಿನ ಪ್ರಕಾರ ಮನೆಯ ನಂಬರುಗಳನ್ನು ಎಲ್ಲರೂ ಕೊಡಬೇಕೆಂದಿದೆ. ಹಾಲಿ ತಮಗೇ ಗೊತ್ತಿರುವಂತೆ ಕೆಲವು ಗ್ರಾಮಗಳಿಗೆ ಸಂಬಂಧಪಟ್ಟ ಜುನಾವಣಾಧಿಕಾರರ ಪಟ್ಟಿಯಲ್ಲಿ ಇಂಥಾ ಯಾವ ನಂಬರುಗಳೂ ಇರುವುದೇ ಇಲ್ಲ. ಅಲ್ಲದೆ, ನಂಬರುಗಳಿರುವ ಕೆಲವು ಗ್ರಾಮಗಳಲ್ಲೂ ಸಹ ಈರೀತಿ ತಮ್ಮ ಹೆಸರು ಬಿಟ್ಟು ಹೋಗಿದೆಯೆಂದು ಅರ್ಜಿ ಹಾಕಿಕೊಳ್ಳಲು ನೀವು ವಿಧಿಸಿರತಕ್ಕ ಫಾರಮ್ಮಿನ ಪ್ರತಿಗಳಲ್ಲಿರತಕ್ಕ ಕಲಮಿನಲ್ಲಿ ಹೆಸರು, ತಂದೆಯ ಹೆಸರು ಅಥವಾ ಗಂಡನ ಹೆಸರು ಮತ್ತು ಪೂರ್ಣ ವಿಳಾಸ ಇವುಗಳನ್ನೆಲ್ಲಾ ಕೊಡಬೇಕು ಎಂದು ಹೇಳಿದೆ. ಇಂಥ ವಿಷಯಗಳಲ್ಲಿ ನೀವು ಮುಂಚೆಯೇ ಏನಾದರೂ ಈ ರೀತಿ ನಮೂದಿಸಬೇಕೆಂದು ತಿಳಿವಳಿಕೆ ಕೊಟ್ಟಿದ್ದರೆ ಎಲ್ಲರೂ ಸರಿಯಾಗಿ ಮಾಡುತ್ತಿದ್ದಾರೆಂದು ಭಾವಿಸಬಹುದಾಗಿತ್ತು. ಈಗೇನೋ ಮುಂದಿನ ತಿಂಗಳು 15ನೆಯ ತಾರೀಖಿನವರೆಗೂ ಈ ಅರ್ಜಿಗಳನ್ನು ಕಳುಹಿಸಿಕೊಡುವುದಕ್ಕೆ ಕಾಲಾವಕಾಶ ಜಾಸ್ತಿ ಕೊಟ್ಟಿದ್ದಾರೆ. ಆದರೆ ಇದುವರೆಗಾಗಲೇ ಕೊಟ್ಟಿರುವವರಲ್ಲಿ ಕೆಲವರು ಹೀಗೆ ಮನೆಯ ನಂಬರನ್ನಾಗಲೇ ಬೀದಿಯ ನಂಬರನ್ನಾಗಲಿ ನಮೂದಿಸದೆ ಬರೀ ಹೆಸರು, ತಂದೆಯ ಹೆಸರುಗಳನ್ನು ತಿಳಿಸಿ ಅಡ್ರೆಸ್ ಅನ್ನುವ ಭಾಗದಲ್ಲಿ ಇಂಥಾ ಗ್ರಾಮವಾಸಿಯೆಂದು ಮಾತ್ರ ಹೇಳಿದ್ದರೆ, ಸರಿಯಾದ ರೀತಿಯಲ್ಲಿ ಅರ್ಜಿಯನ್ನು ಬರೆದಿಲ್ಲವೆಂದು ಎಲ್ಲಿ ಅದನ್ನು ತಳ್ಳಬಿಡುವರೋ ಎಂಬ ಸಂಶಯ ನನಗೆ ಬಂದಿದೆ. ಅಮೇಲೆ ಪ್ರೆಸ್ ನೋಟಿನಲ್ಲಿ ಮುಂದೆ ಈ ರೀತಿ ಹೇಳಿದೆ:

"A person desiring transfer of his name from the electoral rolls of one local unit to another should prefer an objection (in Form VIII) to the inclusion of his name in the former rolls and a separate claim (in Form VI) for the registration of his name in the latter rolls. He should also state precisely and fully in the declaration in the claim form (Form VI) that he has applied for deletion from the former rolls, and in the objection form (Form VIII) that he is applying for deletion as he has preferred a claim for inclusion in the atter rolls."

ಈ ವಿಚಾರದಲ್ಲೂ ಕೂಡ ಒಂದು ಸಂಶಯ ಬಂದಿದೆ. ಏನೆಂದರೆ,

"A person desiring transfer of his name from the electoral rolls of one local unit to another',

ಎಂಬುದರಲ್ಲಿ 'local unit' ಎಂದರೆ ಈಗಿನ ಪ್ರಕಾರ ಒಂದು ಸಬ್ ಡಿವಿಜ್ ಒಂದು local unit ಎಂದು ಮಾಡಿದ್ದಾರೆ. ಮೊದಲು ಕಾನ್ಸ್ಟಿಟ್ಯುಯೆನ್ಸಿ ಎಂದು ಇದ್ದುದನ್ನು ತೆಗೆದು, ಸಬ್ ಡಿವಿಜ್ ರೋಕರ್ ಯೂನಿಟ್ ಮಾಡಿದ್ದಾರೆ. ಇದರ ಪ್ರಕಾರ ಒಂದು ಸಬ್‌ಡಿವಿಜ್‌ನಲ್ಲಿ 3—4 ಕಾನ್ಸ್ಟಿಟ್ಯುಯೆನ್ಸಿಗಳು ಇರುತ್ತವೆ. ಉದಾಹರಣೆಗೆ ಶಿವಮೊಗ್ಗ ಸಬ್ ಡಿವಿಜ್‌ನಲ್ಲಿ ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ, ಹೊನ್ನಾಳಿ, ಚೆನ್ನಗಿರಿ ಇವೆಲ್ಲಾ ಸೇರಿವೆ. ಇಂಥ ಸಂದರ್ಭದಲ್ಲಿ ಒಂದೇ ರೋಕರ್ ಯೂನಿಟ್‌ನಲ್ಲಿ ಒಂದು ಕ್ಷೇತ್ರದಿಂದ ಇನ್ನೊಂದು ಕ್ಷೇತ್ರಕ್ಕೆ ಒಬ್ಬರು ತನ್ನ ಹೆಸರನ್ನು ವರ್ಗಾಯಿಸಿಕೊಳ್ಳುವುದಕ್ಕೆ ಅವಕಾಶ ವಿದೆಯೇ ಎಂದು ಕೇಳುತ್ತೇನೆ. ಏಕೆಂದರೆ 'One local unit to another' ಎಂದರೆ ಉದಾಹರಣೆಗೆ, ಚೆನ್ನಪಟ್ಟಣದಲ್ಲಿರುವವರೊಬ್ಬರು ಚೆನ್ನಗಿರಿಗೆ ವರ್ಗವಾದರೆ ಅಂಥ ಸಂದರ್ಭದಲ್ಲಿ ಮಾತ್ರ ಅತನ ಹೆಸರನ್ನು ವರ್ಗಾಯಿಸಿಕೊಳ್ಳಬಹುದೆಂತಲ್ಲೇ, ಅಥವಾ ಒಂದೇ ರೋಕರ್ ಯೂನಿಟ್ಟಿನಲ್ಲಿ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೂ ವರ್ಗಾಯಿಸಿಕೊಳ್ಳಲು ಇದು ಅನ್ವಯಿಸುತ್ತದೆಯೆ ?

ಆಮೇಲೆ ಮುಂದೆ, ಈ ಫಾರ್ಮ್ ನೋಟಿನಲ್ಲಿ

"A person desiring correction of any entry in the rolls relating either to himself or to any other person should apply in the same form as for objections" ಎಂದು ಹೇಳಿದೆ. ಈ ಪ್ರಕಾರ ತಪ್ಪನ್ನು ತಿದ್ದುವುದಕ್ಕೆ ಅವಕಾಶಮಾಡಿದೆ. ಇದಕ್ಕೆ ಮುಂದೆ ಹೀಗೆ ಹೇಳಿದೆ :

"Under the rules, the Electoral Registration Officer can apply to the Revising Authority for the making of any corrections in the electoral roll which he considers necessary for the preparation of a complete and accurate roll. Therefore, in cases of obvious printing and clerical mistakes noticed in the rolls such as wrong information about father's or husbands' names, address, spelling mistakes, etc., it is sufficient if they are brought to the notice of the Electoral Registration Officer by a letter, and it is not necessary to prefer an objection in the printed form. The Electoral Registration Officer will also apply to the Revising Authority. for the removal of the names of deceased voters and disqualified persons."

ಇದಕ್ಕೆ ಮುಂದೆ ಇನ್ನೊಂದು provision ಇದೆ :

"If there are any large scale omissions of names of voters from the electoral rolls, the Electoral Registration Officer will himself make an application to the Revising Authority, concerned for the inclusion of such names."

ಈಗ ನಾನು ಮೊದಲು ಹೇಳಿದ ಪ್ರಕಾರ printed form ನಲ್ಲಿ ಯಾವನಾದರೊಬ್ಬನ ಹೆಸರನ್ನು ಬಿಟ್ಟಿದ್ದರೆ ಆ ಹೆಸರನ್ನು ಸೇರಿಸಿಕೊಳ್ಳುವುದಕ್ಕೆ ಒಂದು ಕಲಮು ಇದೆ. ಫಾರ್ಮ್‌ನೋಟಿನ ಇನ್ನೊಂದು ಕಲಮಿನಲ್ಲಿ ಯಾವು ದಾದರೂ ಒಂದುಕಡೆ ಬಹಳ ಹೆಸರುಗಳು ಬಿಟ್ಟುಹೋಗಿದ್ದರೆ ಅಂಥ ಸಂದರ್ಭದಲ್ಲಿ ರಿಜಿಸ್ಟರ್ ಮಾಡಿಕೊಳ್ಳತಕ್ಕ ಅಧಿಕಾರಿಗಳು ರಿವೈಸ್ ಮಾಡತಕ್ಕ ಅಧಿಕಾರಿಗಳಿಗೆ ಬರುವ ಅಂಥಾ ಹೆಸರುಗಳನ್ನು ಸೇರಿಸಬಹುದೆಂದಿದೆ. ಈಗ ನಮ್ಮ ಕಡೆ ಕೆಲವು ಗ್ರಾಮಗಳಲ್ಲಾಗಿರುವ ವಿಷಯವನ್ನು ತಮ್ಮ ಗಮನಕ್ಕೆ ಸ್ವಲ್ಪ ತರುತ್ತೇನೆ. 800—900 ವೋಟರುಗಳಿರುವ ಕೆಲವು ಗ್ರಾಮಗಳಲ್ಲ ಕೇವಲ 400—500 ಹೆಸರುಗಳು ಮಾತ್ರ ಸೇರಿದ್ದು 300—400ರಷ್ಟು ಬಿಟ್ಟುಹೋಗಿದೆ. ಆ ಗ್ರಾಮಗಳವರು ಅರ್ಜಿಗಳನ್ನು ಕೊಟ್ಟು ತಮ್ಮ ಹೆಸರುಗಳನ್ನು ಸೇರಿಸಿಕೊಳ್ಳಬೇಕೆಂದು ಕೇಳಿದ್ದಾರೆ; ರಿವೈಸ್ ಮಾಡತಕ್ಕ ಅಧಿಕಾರಿಗಳು ಆಯಾ ಪ್ರದೇಶಕ್ಕೆ ಸಂಬಂಧಪಟ್ಟ ಮುನಿಸೀಫರು ಅಥವಾ ಮ್ಯಾಜಿಸ್ಟ್ರೇಟರೆಂದು ತಿಳಿಸಿದೆ. ನಾನೀಗ ಹೇಳಿದ ಸಂದರ್ಭದಲ್ಲಿ ಈ ರಿವೈಸಿಂಗ್ ಅಧಿಕಾರಿಗಳು ಯಾವ ವಿಧಾನವನ್ನು ಅನುಸರಿಸುತ್ತಾರೋ ನಮಗೆ ಅನುಮಾನವಾಗಿದೆ. ಈ ಬಗ್ಗೆ ನೀವೇನಾದರೂ ನಿಬಂಧನೆಗಳನ್ನು ಮಾಡಿದ್ದೀರೋ ಇಲ್ಲವೋ, ಅಥವಾ ಮಾಡಿದ್ದು ನಮಗೆ ಕೈಸೇರಿಲ್ಲವೋ ಗೊತ್ತಿಲ್ಲ. ಈಗ ನಮಗೆ ತಿಳಿದಿರುವ ಪ್ರಕಾರ ಮುನಿಸೀಫರಾಗಲಿ ಅಥವ ಇನ್ನಾವ ರಿಜಿಸ್ಟರಿಂಗ್ ಆಫೀಸರೇ ಆಗಲಿ ನಾವು ಪ್ರತ್ಯೇಕವಾಗಿ ಅರ್ಜಿಗಳನ್ನು ಕೊಟ್ಟರೆ ಅವುಗಳನ್ನು ಅವರಾರಾರಿಗೆ ಅವರ ಅಭಿಪ್ರಾಯಕ್ಕೆ ಕಳುಹಿಸಿಕೊಡುತ್ತಾರೆ. ಮುನಿಸೀಫರೇನೂ ಆ ನರ್ಕಲ್ಲಿಗೆ ಹೋಗಿ ವಿಚಾರಣೆ ನಡೆಸುವುದಿಲ್ಲ. ಆದ್ದರಿಂದ ಎಷ್ಟು ಆಪ್ಲಿಕೇಷ್ನಗಳು ಬಂದರೂ ತಮ್ಮ ಹೆಡ್ ಕ್ವಾರ್ಟರಿನಲ್ಲಿಯೇ ಇದ್ದುಕೊಂಡು ನಿರ್ಧರಿಸುತ್ತಾರೆಯೇ ಅಂದರೆ ಕೋರ್ಟಿಗೆ ಬರುವ ಸಿವಿಲ್ ಕೇಸುಗಳಂತೆ ಪಾರ್ಟಿಗಳಿಗೆ ನೋಟೀಸ್ ಕೊಟ್ಟು, ಪಾರ್ಟಿಗಳು ಹಾಜರಾದರೆ ಅವರನ್ನು ವಿಚಾರಣೆಮಾಡಿ ತೀರ್ಮಾನ ಕೊಡುವುದು, ಯಾರೂ ದಾರದೆ. ಸಾಕ್ಷ್ಯ ಕೊಡದಿದ್ದರೆ ಆ ಅರ್ಜಿಗಳನ್ನು ತಳ್ಳಿಬಿಡುತ್ತಾರೆಯೇ ಎಂಬುದನ್ನು ತಿಳಿಸಬೇಕು. ಅಲ್ಲದೆ, ಒಂದುವೇಳೆ ಸಿವಿಲ್ ಕೇಸುಗಳನ್ನು ಯಾವ ರೀತಿ ತೀರ್ಮಾನಮಾಡುತ್ತಾರೆಯೋ ಆ ರೀತಿ ನೋಟೀಸ್ ಕೊಟ್ಟು ಪಾರ್ಟಿಗಳನ್ನು ಬರಮಾಡಿಕೊಂಡರೂ, ಅವುಗಳಿಗೆ ರೂಲ್ಸ್ ಪ್ರಕಾರ ವೋಟರುಗಳ ಪಟ್ಟಿಯಲ್ಲಿ ಸೇರಲು ಅಧಿಕಾರವಿದ್ದರೂ, ಅವರು ನೀವು ಕೇಳುವ ರೀತಿಯಲ್ಲಿ 1951ನೆಯ ಇಸವಿ ಮಾರ್ಚ್ 31ನೆಯ ತಾರೀಖಿನೊಳಗೆ ಇಷ್ಟು ವಯಸ್ಸಾಗಿದೆಯೆಂತಲೂ, ಅದಕ್ಕೆ ಹಿಂದಿನ 150 ದಿವಸಗಳಲ್ಲಿ ಆ ಚುನಾವಣಾ ಯೂನಿಟ್ಟಿನಲ್ಲಿ ವಾಸವಾಗಿದ್ದನೆಂದು ರುಜುವಾತು ಕೊಡಿ ಯೆಂತಲೂ ಕೇಳಿದರೆ, ಅತನಿಗೆ ಅದನ್ನು ಹೇಳುವಷ್ಟು ತಿಳಿವಳಿಕೆಯಿದೆಯೇ ಎಂಬುದನ್ನು ನೀವು ಯೋಚಿಸಬೇಕು. ಒಂದುಪಕ್ಷ ಅಷ್ಟು ತಿಳಿವಳಿಕೆಯಿದ್ದರೂ ತನ್ನ ಹೆಸರನ್ನು ಸೇರಿಸಿಕೊಳ್ಳುವ ಬಗ್ಗೆ ಅಷ್ಟು ಖರ್ಚನ್ನು ಮಹಿಸಿಕೊಂಡು ಅಲ್ಲಿಗೆ ಹೋಗುವ ಶ್ರಮ ತೆಗೆದುಕೊಳ್ಳುತ್ತಾನೆಯೇ ಮತ್ತು ಆ ಖರ್ಚನ್ನು ನಿರ್ವಹಿಸುವ ಶಕ್ತಿಯಿದೆಯೇ ಎಂಬುದನ್ನೂ ತಾವು ಗಮನಿಸಬೇಕು. ಈ ವಿಚಾರದಲ್ಲಿ ತಾವೀಗ ಏನಾದರೂ ತಕ್ಕ ಸೂಚನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದರೆ ಅವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗಿಲ್ಲದೆ, ಈ ವಿಷಯ ನಿಮಗೆ ಸಂಬಂಧಪಟ್ಟಿದ್ದಲ್ಲ, ಚೀಫ್ ಎಲೆಕ್ಷನ್ ಕಮಿಷನರನ್ನು ಕೇಳಬೇಕೆಂದು ಹೇಳುವುದಾದರೆ, ನೀವು ಅವರನ್ನು ವಿಚಾರಿಸಿ 'ಈ ವಿಷಯದಲ್ಲಿ ಏನು ವಿಧಾನವನ್ನು ಅನುಸರಿಸಬೇಕೆಂದು ತಿಳಿಸಿದ್ದಾರೆಂದು ಹೇಳಬೇಕು. ಅವರು ನಿರ್ದಿಷ್ಟವಾಗಿ ಏನೂ ಮಾಡದೆ ಇದ್ದರೆ ಮತ್ತು ತಾವು ಅವರಿಗೆ ಸಲಹೆ ಕೊಡುವ ಅವಕಾಶವಿದ್ದರೆ ಈ ರಿವೈಸಿಂಗ್ ಅಥಾರಿಟಿ ಪ್ರತಿಯೊಂದು ಗ್ರಾಮಕ್ಕೂ ಹೋಗಿ ಇತ್ಯರ್ಥಮಾಡುವಂತೆ ತಿಳಿಸಬೇಕೆಂದು ನನ್ನ ಸೂಚನೆ.

(SRI L. SIDDAPPA.)

ಆಮೇಲೆ, ಕೊನೆಯ ಪ್ಯಾರಾದಲ್ಲಿ ಹೇಳಿರುವ

"If there are any large scale omissions ..... the Electoral Registration Officer will himself make an application to the Revising Authority concerned... ...." ಎಂಬುದರ ವಿಷಯ. ಇಂಥ ಸಂದರ್ಭವೂ ಒಂದು ನಮ್ಮಲ್ಲಿ ಒದಗಿತು. ಇದಕ್ಕೆ ಸಂಬಂಧಪಟ್ಟ ಆಫೀಸರನ್ನು ಕೇಳಿದಾಗ ಅವರು ಹೇಳಿದರು, "ಯಾವುದಾದರೂ ಗ್ರಾಮದಲ್ಲಿ ವೋಟರ ಪಟ್ಟಿಯನ್ನು ತಯಾರುಮಾಡಿದ್ದು, ಅದರಲ್ಲಿ ಹೇರಳವಾಗಿ ಬಿಟ್ಟುಹೋಗಿದ್ದರೂ ಅಲ್ಲಿನ ಪ್ರತಿಯೊಬ್ಬರೂ ಪ್ರತ್ಯೇಕವಾಗಿ ಅಪ್ಲಿಕೇಷ್ನ್ ಕೊಟ್ಟೇ ಕೊಡಬೇಕು. ಅಷ್ಟೇ ಹೊರತು ನಾವೇ ಹೋಗಿ ನೋಡುವುದಿಲ್ಲ" ಎಂದು. ಆದ್ದರಿಂದ ಈ ವಿಚಾರದಲ್ಲಿ ನಾನೀಗ ಹೇಳಿದ ನಿಯಮ ಕೇವಲ ಯಾವುದಾದರೂ ಪ್ರದೇಶದಲ್ಲಿ ಚುನಾವಣಾ ಪಟ್ಟಿ ತಯಾರಾಗದೆಯೇ ಇದ್ದರೆ ಅಂಥ ವುಗಳಿಗೆ ಅನ್ವಯಿಸುತ್ತದೆಯೇ ಅಥವಾ ಒಂದು ಪ್ರದೇಶದಲ್ಲಿ ಪೂರ್ತಿಯಾಗಿ ಎಲ್ಲರ ಹೆಸರುಗಳೂ ಸೇರದೆ ಹೇರಳವಾಗಿ ಬಿಟ್ಟುಹೋಗಿದ್ದರೆ ಅಂಥ ಪ್ರದೇಶಕ್ಕೂ ಅನ್ವಯಿಸುತ್ತದೆಯೇ ಎಂಬುದನ್ನು ವಿಶದಪಡಿಸುವುದಲ್ಲದೆ ಸಂಬಂಧಪಟ್ಟ ಅಧಿಕಾರಿಗೇನೇ ಸರಿಯಾದ ತಿಳಿವಳಿಕೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಈ ರೀತಿಯಾಗಿ ನನಗಿದ್ದ ನಾಲ್ಕಾರು ಸಂಶಯಗಳನ್ನು ನಿವಾರಣೆ ಮಾಡಿಕೊಳ್ಳುವ ಬಗ್ಗೆ ತಂದಿರತಕ್ಕ ಈ ಖೋತಾ ಸೂಚನೆಯನ್ನು ನಾನೀಗ ಸಭೆಯ ಮುಂದಿಡುತ್ತೇನೆ.

Mr. CHAIRMAN.—Cut Motion moved,—

"That the demand under the head '1. General Administration' be reduced by Re. 1" 2

ಶ್ರೀ ಎ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).—ಸ್ವಾಮಿ, ಈಗಾಗಲೇ ಮಾನ್ಯ ಶ್ರೀ ಎಲ್. ಸಿದ್ದಪ್ಪನವರು ಸೂಚಿಸಿರತಕ್ಕ ವಿಷಯಗಳ ಜೊತೆಗೆ ಸೇರಬೇಕಾಗಿರುವ ಒಂದೆರಡು ಅಂಶಗಳನ್ನು ನಾನೀಗ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಏಕೆಂದರೆ, ಈಗ ಕೈಬಿಟ್ಟು ಹೋಗಿರತಕ್ಕ ಒಂದು ಹೆಸರನ್ನು ಮತ್ತೆ ಈಗ ತಯಾರಿಸಿರುವ ಮತದಾರರ ಪಟ್ಟಿಯಲ್ಲಿ ಸೇರಿಸತಕ್ಕದ್ದು ಬಹಳ ಕಷ್ಟಕ್ಕೆ ಬಂದು ಹೋಗಿದೆ. ನನ್ನ ಕೈಲೇಗ ಒಂದು ಫಾರಂ ಇದೆ. ಆದರೆ ಹೀಗೆ ಕೈಬಿಟ್ಟು ಹೋಗಿರತಕ್ಕ ಹೆಸರುಗಳನ್ನು ಸೇರಿಸತಕ್ಕ ಸಂದರ್ಭದಲ್ಲಿ 4-5 ನಮೂನೆಯ ಫಾರಂಗಳಿವೆಯಂತೆ. ಸಾಗೆ ಸೇರಿಸಬೇಕೆಂದು ಕೇಳುವಾಗ ಸದರಿ ಮನುಷ್ಯನು ತನ್ನ ಹೆಸರು, ವಾಸಸ್ಥಳ, ಹುಟ್ಟಿದ ಊರು, ತನಗಿರತಕ್ಕ ಅರ್ಹತೆ ಇತ್ಯಾದಿಗಳನ್ನೆಲ್ಲಾ ಭರ್ತಿಮಾಡಿ, ಅದರ ಜೊತೆಗೆ ಗೆಜೆಟೆಡ್ ನೌಕರದಾರರ ಒಂದು ಸರ್ಟಿಫಿಕೇಟನ್ನು ಲಗತ್ತಿಸಿ ಅದನ್ನು ತೆಗೆದುಕೊಂಡು ಹೋಗಿ ಮುನಿಸಿಪ್ ಮ್ಯಾಜಿಸ್ಟ್ರೇಟರವರಲ್ಲಿ ಒಪ್ಪಿಸಬೇಕೆಂದಿದೆ. ಆದರೆ ಹಿಂದೆ ಇಂಥಾ ವಿಚಾರಗಳಲ್ಲಿ ರಿಟರ್ನಿಂಗ್ ಆಫೀಸರಿಗೆ ಅಧಿಕಾರ ಕೊಡಲಾಗಿತ್ತು. ಆದರೆ ಈಗ ಹೇಳಿರುವ ಪ್ರಕಾರ ಮುನಿಸಿಪ್ ಮ್ಯಾಜಿಸ್ಟ್ರೇಟರಲ್ಲಿಗೆ ಹೋಗಿ ತನ್ನ ಫಾರಂ ಕೊಟ್ಟು ತಾನು ಅಲ್ಲ ಪ್ರಮಾಣ ಕೈಹೆತ್ತನ್ನು ಕೊಟ್ಟು ಬರಬೇಕೆಂದರೆ ಈ ವಿಧಾನದಿಂದ ಬಹಳ ಕಷ್ಟವಾಗುತ್ತದೆ. ಈಗ ಅನೇಕ ಹೆಸರುಗಳು ಕೈ ಬಿಟ್ಟುಹೋಗಿವೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮತದಾರರ ಪಟ್ಟಿಯಲ್ಲಿ ಮಾನ್ಯ ಡಾ॥ ರಾಜೇಂದ್ರ ಪ್ರಸಾದರವರ ಹೆಸರೇ ಕೈ ಬಿಟ್ಟು ಹೋಗಿತ್ತಂತೆ!

ಶ್ರೀ ವಿ. ಎಸ್. ನಾರಾಯಣರಾಯರು.—ಇಲ್ಲೂ ಸಹ ಅದೇ ರೀತಿಯಾಗಿದೆ. ಶ್ರೀ ಟಿ. ಸಿದ್ದಲಿಂಗಯ್ಯನವರ ಹೆಸರೂ ಬಿಟ್ಟು ಹೋಗಿತ್ತು, ಮತ್ತು ನನ್ನ ಹೆಸರೂ ತಪ್ಪು ಬಿದ್ದಿದೆ. ಮೂರು ತೆರನಾದ ಫಾರಂಗಳಿರುವುದರಿಂದ ಹೆಚ್ಚಿಗೆ ಸೇರಿಸತಕ್ಕ ಸಂದರ್ಭದಲ್ಲಿ ಯಾವ ಫಾರಂ ಉಪಯೋಗಿಸಬೇಕು, ತಿದ್ದುಪಡಿ ಮಾಡತಕ್ಕ ವೇಳೆಯಲ್ಲಿ ಯಾವ ಫಾರಂನ್ನು ಉಪಯೋಗಿಸಬೇಕು, ಎಂಬ ಇತ್ಯಾದಿ ವಿಚಾರಗಳೆಲ್ಲ ಅನೇಕರಿಗೆ ಬಹಳ ಕಷ್ಟದ ಸಮಸ್ಯೆಗಳಾಗಿವೆ. ಈ ವಿಚಾರಗಳನ್ನೆಲ್ಲಾ ತಿಳಿದು ನಡೆದುಕೊಳ್ಳಲು ಎಷ್ಟು ಜನರಿಗೆ ಸಾಧ್ಯ. ಎಷ್ಟು ಜನಗಳಿಗೆ ಅಸಾಧ್ಯವೆಂಬುದನ್ನು ತಾವು ಆಲೋಚಿಸಬೇಕು. ನಾನು ಆ ರೀತಿ ಕೈ ಬಿಟ್ಟು ಹೋಗಿದ್ದ ನನ್ನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕೆಂದು ಅರ್ಜಿ ಸಲ್ಲಿಸಿದನಂತರ, ಆ ಮುನಿಸಿಪ್ ಮ್ಯಾಜಿಸ್ಟ್ರೇಟರಿಂದ ನನಗೆ ಇಂಥ ದಿವಸ ಮಧ್ಯಾನ್ನ ಒಂದು ಘಂಟೆಗೆ ಬರಬೇಕೆಂಬುದಾಗಿ ಒಂದು ಸಮನ್ಸ್ ಬಂದಿತ್ತು. ಈಗ ತಾನೆ ನಾನು ಅಲ್ಲಿಗೆ ಹೋಗಿದ್ದೆ; ಅವರು ಕಾರ್ಪೊರೇಷನ್ ಆಫೀಸಿನ ಗುಮಾಸ್ತರನ್ನು ಬರಮಾಡಿಕೊಂಡು, ಅವರ ದಾಖಲೆಗಳನ್ನೆಲ್ಲಾ ತರಿಸಿ ನನ್ನ ಹೆಸರನ್ನು ಹಾಗೆ ಕೈ ಬಿಡಲು ಕಾರಣವೇನು, ಏಕೆ ಆ ರೀತಿಯಾಯಿತು, ತಪ್ಪಾಗಲು ಕಾರಣವೇನು, ಎಂಬ ಇತ್ಯಾದಿ ವಿಚಾರಗಳನ್ನೆಲ್ಲ ಪೂರೈಸಿದನಂತರ ಅವರು ತೀರ್ಮಾನ ಕೊಟ್ಟರು. ಇದು ಎಷ್ಟು ಕಷ್ಟವಾಗಿರುತ್ತೆಂಬ ವಿಚಾರ ನನಗೆ ಆಗ ತಿಳಿಯಬಂದಿತು. ಆದರೆ ಇಷ್ಟು ಪ್ರಯಾಸಪಟ್ಟು ಒಂದು ಹೆಸರನ್ನು ಸೇರಿಸಬೇಕೆಂದು ಮಾಡಿರುವ ಪದ್ಧತಿ ನಿಜವಾಗಿಯೂ ಬಹಳ ಕೊಡಕಿನದಾಗಿರುತ್ತೆ. ಇದು ಉತ್ತಮವಾದ ರೀತಿಯಲ್ಲವೆಂದು ತೋರುತ್ತೆ. ಈ ಬಗ್ಗೆ ನಾನು ಕೇಂದ್ರದ ಚುನಾವಣಾ ಕಮಿಷನರಿಗೂ ಮತ್ತು ಮೈಸೂರು ಎರೆಕ್ಷ್ ಕಮಿಷನರಿಗೂ ಪತ್ರ ಬರೆದಿದ್ದೆ. ಆದರೆ ಈಗ ಈ ಫಾರಂಗಳೆಲ್ಲಾ ಅಚ್ಚಾಗಿ ಹೋಗಿರುವುದರಿಂದ ಅವುಗಳನ್ನು ಬದಲಾಯಿಸುವುದಕ್ಕೆ ಕಾಲವಿಲ್ಲ, ಎಂಬುದಾಗಿ ಕೇಂದ್ರದ ಕಮಿಷನರಿಂದ ಉತ್ತರ ಬಂದಿತು. ಆದರೆ ಮಾನ್ಯ ಮಂತ್ರಿಗಳು ಕೋಪಿಸಿಕೊಳ್ಳಬಾರದು, ನಮ್ಮ ಕಮಿಷನರಿಂದ ನನಗೆ ಇನ್ನೂ ಯಾವ ಉತ್ತರವೂ ಬಂದಿಲ್ಲ. ಏನೇ ಆಗಲಿ ಈ ಪದ್ಧತಿ ಬಹಳ ಕಠಿಣವಾಗಿದೆ, ಹೀಗಿರಬಾರದು. ಈಗ ವಿಧಿಸಿರುವ ಕ್ರಮವನ್ನು ಬದಲಾಯಿಸಿ ಗೆಜೆಟೆಡ್ ನೌಕರರ ಸರ್ಟಿಫಿಕೇಟ್ ಆಗಲಿ, ಈ ಮಾನ್ಯ ಸಭೆಯ ಯಾರೊಬ್ಬ ಸದಸ್ಯರಿಂದಾಗಲೀ ಅಥವಾ ಕಾರ್ಪೊರೇಷನ್ ಸದಸ್ಯರಿಂದಾಗಲೀ ಒಂದು ಸರ್ಟಿಫಿಕೇಟನ್ನು ತಂದ ಪಕ್ಷದಲ್ಲಿ ಈಗಲೂ ಅವರ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸುವಂತೆ ತಾವು ಸೂಚನೆ ಕೊಡಬೇಕೆಂದು ನಾನು ಹೇಳುತ್ತೇನೆ. ಹೀಗೆ ಸೇರಿಸತಕ್ಕ ಅವಕಾಶ ಇನ್ನೂ ಇದೆ. ಹಾಗೆ ಮಾಡಿದರೆ ಇನ್ನೂ ಹೆಚ್ಚು ಮತದಾರರ ಹೆಸರನ್ನು ಸೇರಿಸಲು ಅವಕಾಶವಾಗುತ್ತದೆ. ಆದರೆ ಗ್ರಾಂಟ್ ವಿಚಾರದಲ್ಲಿ ನಾನು ವಿರೋಧಿಸಬೇಕಾದ ಅಗತ್ಯವೇನೂ ಇಲ್ಲವೆಂದು ಹೇಳ ತ್ತೇನೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ನಿಮ್ನ ಪಂಗಡ).—ಸ್ವಾಮಿ, ಈ ಮತದಾರರ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಹೆಸರುಗಳನ್ನು ಸೇರಿಸುವ ವಿಚಾರದಲ್ಲಿ ಕೆಲವು ಅನಾನುಕೂಲಗಳಾಗಿವೆ. ಅವುಗಳ ವಿಚಾರದಲ್ಲಿ ಈಗಾಗಲೆ ನಮ್ಮ ಸ್ನೇಹಿತರುಗಳು ಈ ವಿಚಾರವನ್ನು

ಚೆನ್ನಾಗಿ ವಿವರಿಸಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ ಅಚ್ಚಾಗಿರುವ ಫಾರಂಗಳನ್ನು ನೋಡಿದರೆ, ಅವುಗಳಲ್ಲಿ ಈ ರೀತಿ ಅಚ್ಚಾಗಿರುವುದು ಕಂಡು ಬರುತ್ತದೆ.—(1) ಓಟರ ಹೆಸರು, (2) ತಂದೆ ಅಥವಾ ಗಂಡನ ಹೆಸರು, (3) ಗಂಡಸೆ ಅಥವಾ ಹೆಂಗಸೆ ಮತ್ತು, (4) ಮತದಾರನ ವಯಸ್ಸು, ಇಷ್ಟು ವಿಚಾರವಿದೆ, ಆದರೆ ಇದನ್ನು ಒಂದು ಕ್ರಮದ ಪ್ರಕಾರ ಮಾಡಿಲ್ಲ. ಅನೇಕ ಸಂದರ್ಭಗಳಲ್ಲಿ ಮತದಾರರಿಗೆ ತೊಂದರೆಯಾಗಲು ಹಲವು ಕಾರಣ ಗಳಿವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ತಮ್ಮ ಹಕ್ಕನ್ನು ಚಲಾಯಿಸುವ ಬಗ್ಗೆ ತೊಂದರೆ ಬರಬಹುದು. ಈಗಾಗಲೇ ನಿಯಾಮಕವಾಗಿರತಕ್ಕರೀತಿಯಲ್ಲಿ ಸಂಸ್ಥಾನಾಮಳೆ ಮತದಾರರ ಪಟ್ಟಿತಯಾರಾಗಿ ಹೋಗಿದೆ. ಹಾಗೊಂದು ವೇಳೆ ಅವೆಲ್ಲ ಅಚ್ಚಾಗಿದ್ದರೂ ಕೂಡ ಆ ಬಗ್ಗೆ ಒಂದು ವಿವರಣೆ ಕೊಟ್ಟು ಸರಿಪಡಿಸಲಿಕ್ಕೆ ಈಗಲೂ ಅವಕಾಶ ವಿದೆಯೆಂದು ಕಾಣುತ್ತಿದೆ. ಸರ್ಕಾರದವರು ಈಗ ತಯಾರಿಸಿರತಕ್ಕ ಮತದಾರರ ಪಟ್ಟಿಯನ್ನು ತಿದ್ದುಪಡಿ ಮಾಡಬಹುದೆಂದು ಒಂದು ಸೂಚನೆ ಕೊಟ್ಟರೆ ಅನು ಕೂಲವಾಗುತ್ತದೆಂದು ನಾನು ತಿಳಿಸುತ್ತೇನೆ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಒಂದು ಓಟರ್ ಪಟ್ಟಿ ಯಲ್ಲಿ "ಶಂಕರಪ್ಪ–ಮಾದಪ್ಪ–ಗ, 25" ಎಂತ ಇದೆ. ಆದರೆ ಆ 'ಗ' ಎಂಬುದನ್ನು ನಾವು ಒಂದು ವೇಳೆ ಅರ್ಥ ಮಾಡಿಕೊಳ್ಳಬಹುದೇ ಹೊರತು ಇತರರಿಗೆ ಯಾರಿಗೂ ಗೊತ್ತಾಗುವುದಿಲ್ಲ. ಇದಕ್ಕೆ ಯಾವ ಕಾಲಂ, ಯಾವ ಕಾಲಂಗೆ ಯಾವುದು ಸೇರುತ್ತೆ, ಅಥವ ಯಾವುದು ಸೇರಬೇಕು ಎಂಬುದು ಸ್ಪಷ್ಟವಾಗಿಲ್ಲ. ಸರಿಯಾದ ಕಾಲಂಗಳಲ್ಲಿ–ಸುಮ್ಮನೆ ಶಂಕರಪ್ಪ–ಮಾದಪ್ಪ ಎಂದರೆ ಎರಡೂ ಒಂದೇ ಇದ್ದ ಹಾಗೆ ಇದೆ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು).—ಅದರಲ್ಲೇನೂ ಅಂಥ ಪ್ರಮಾದ ವಿಲ್ಲ. 'ಗ' ಎಂದರೆ ಗಂಡಸೆಂದು, 25, ಎಂದಿರುವುದು 25ವರ್ಷ ವಯಸ್ಸೆಂದೂ ಅರ್ಥವಾಗೇ ಆಗುತ್ತೆ. ಎಲ್ಲ ರಿಗೂ ಇದು ಗೊತ್ತಿರುವುದೇ ಆಗಿದೆ.

ಶ್ರೀ ಎಂ. ಮಾದಯ್ಯನವರು.—ಅಂತೂ ನಾನು ಹಾಗೆ ನೋಡಿದ್ದರಲ್ಲಿ ಈ ಮತದಾರರ ಪಟ್ಟಿಯಲ್ಲಿ ಈ ರೀತಿ ಅನಾನುಕೂಲವಿರುವುದು ಕಂಡು ಬಂದಿದೆ. ಆದರೆ ನಾನು ಹೇಳತಕ್ಕದ್ದು, ಈಗ ತಾವು ತಯಾರಿಸಿರುವ ಓಟರುಗಳ ಪಟ್ಟಿಯನ್ನು ಮರಳಿ ಅಚ್ಚುಹಾಕಿಸಲು ಸಾಧ್ಯ ವಿಲ್ಲದಿದ್ದರೂ, ಇರತಕ್ಕ ಅನಾನುಕೂಲಗಳನ್ನು ತಾವು ನಿವಾರಣೆ ಮಾಡಲು ಅವಕಾಶವಿರುತ್ತೆಯಾದ್ದರಿಂದ, ಅವುಗಳನ್ನು ನಿವಾರಣೆಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಎರಡನೆಯದಾಗಿ, ಶ್ರೀ ಎಲ್. ಸಿದ್ದಪ್ಪ ನವರು ತಿಳಿಸಿದ ಪ್ರಕಾರ ಅನೇಕ ಗ್ರಾಮಾಂತರ ಗಳಲ್ಲಿ ಈಗ ತಯಾರಾಗಿರುವ ಪಟ್ಟಿಯಲ್ಲಿ ಅನೇಕರ ಹೆಸರು ಕೈ ಬಿಟ್ಟು ಹೋಗಿದೆ. ನಮ್ಮ ನಂಜನಗೂಡು ತಾಲ್ಲೂಕಿನಲ್ಲೂ ಈ ರೀತಿಯಾಗಿರುವುದು ನನ್ನ ಗಮ ನಕ್ಕೆ ಬಂದಿದೆ. ಇದನ್ನು ಸರಿಪಡಿಸಬೇಕೆಂದು ಸೂಚಿ ಸುತ್ತೇನೆ. ಅಲ್ಲದೆ ತಾವು ಪ್ರಕಟಣೆ ಹೊರಡಿಸಿರತಕ್ಕ ಅಂದರೆ 1950ರ ನವೆಂಬರಿನಲ್ಲಿ ಸರ್ಕಾರದಿಂದ ಹೊರ ಬಿದ್ದಿರುವ ನಂ 104–1–50 ಸರ್ಕ್ಯುಲರ್‌ನಲ್ಲಿ ಸಹ ಇದನ್ನು ನಮೂದಿಸಿರುತ್ತೆ. ಈ ಸರ್ಕ್ಯುಲರಿನಲ್ಲಿ ಏನು ಹೇಳಿದೆಯೆಂದರೆ—'ಹಾಗೆ ಅಧಿಕ ಸಂಖ್ಯೆಯಲ್ಲಿ ಮತದಾರರ ಹೆಸರುಗಳನ್ನು ಎರ್ರೆಲ್ಲ ಕೈ ಬಿಡಲಾಗಿ ದೆಯೋ ಅಂಥಾ ಸಂದರ್ಭಗಳಲ್ಲಿ ಎರೆಕ್ಷ್ಟ್ ಅಧಿಕಾರ ವುಳ್ಳ ನಬ್ ಡಿವಿಜ್ ಆಫೀಸರು, ಹಾಗೆ ಕೈಬಿಟ್ಟಿರುವ ಹೆಸರುಗಳನ್ನು ಪಟ್ಟಿಯಲ್ಲಿ ಸೇರಿಸುವಂತೆ ಮುನ್‌ಸೀಫ್ ರಿಗೆ ಈ ಅಂಶವನ್ನು ತಿಳಿಯಪಡಿಸಿ ಅದನ್ನು ಸರಿಪಡಿ ಸಲು, ಇದರಲ್ಲಿ ಒಂದು ಸೂಚನೆ ಕೊಡಲಾಗಿದೆ.' ಈ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಸಂಸ್ಥಾನದ ಸರ್ಕಾರಕ್ಕೆ ಒಂದು ವೇಳೆ ಅಧಿಕಾರವಿಲ್ಲ ದಿದ್ದರೂ ಅದನ್ನು ಎಷ್ಟರ ಮಟ್ಟಿಗೆ ಸರಿಪಡಿಸಬಹುದು ಎಂದು ಯೋಚನೆ ಮಾಡಿದರೆ ಅದಕ್ಕೆ ಮಾರ್ಗವಿದೆ. ಆಯಾ ತಾಲ್ಲೂಕಿನ ಅಮಲ್ದಾರರು ಮತ್ತು ರೆವೆನ್ಯೂ ಇನ್‌ಸ್ಪೆಕ್ಟರುಗಳಿಗೆ ಸೂಚನೆ ಕೊಟ್ಟು ಪಟ್ಟಿಯಲ್ಲಿ ಬಿಟ್ಟು ಹೋಗಿರುವವರ ಹೆಸರುಗಳನ್ನು ಅವರು ತಿಳಿದು ಹೆಚ್ಚು ಮಂದಿ ಕೈ ಬಿಟ್ಟಿದ್ದರೆ ಅದನ್ನು ಸರಿಪಡಿಸಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸುವುದು ಒಂದು ಮಾರ್ಗ. ಬಿಟ್ಟು ಹೋಗಿರುವವರ ಸಂಖ್ಯೆ ಹೆಚ್ಚಾಗಿಲ್ಲದೆ ಒಂದೆರಡು ಮಾತ್ರ ಇದ್ದರೆ ಅದನ್ನು ತಿದ್ದುಪಡಿ ಮಾಡು ವುದಕ್ಕೆ ನಾನು ಮೊದಲು ಹೇಳಿದಂತೆ ಆಗುವುದಿಲ್ಲ ವೆಂದು ಅಧಿಕಾರಿಗಳು ಹೇಳಬಹುದು. ಆ ಸಂದರ್ಭ ದಲ್ಲಿ ವಿಧಿ ನಿಯಮಗಳಿಗನುಸಾರವಾಗಿ ಅರ್ಜಿ ಹಾಕ ಬೇಕೆಂದು ಹೇಳುತ್ತಾರೆ. ಆಗ ಅಂಥ ಅರ್ಜಿ ಅಥವಾ ಫಾರಂಗಳನ್ನು ಅಮಲ್ದಾರರು ಅಥವಾ ಸಬ್ ಡಿವಿಜ್ ಆಫೀಸರು ತೆಗೆದುಕೊಂಡು ಹೋಗಿ ಬಿಟ್ಟು ಹೋಗಿರುವ ವರಿಂದ ರುಜು ಮಾಡಿಸಿ ಮುಂದಿನ ಕ್ರಮ ನಡೆಸಿದರೆ ಸಹಾಯವಾಗುತ್ತದೆ. ಶ್ರೀ ಸಿದ್ದಪ್ಪನವರು ಹೇಳಿದ ಹಾಗೆ ಗ್ರಾಮಾಂತರಗಳಲ್ಲಿರುವ ಜನರು ಕಛೇರಿಗಳಿಗೆ ಬಂದು ಫಾರಂ ತಂದು ಭರ್ತಿ ಮಾಡುವುದು ಎಂದಿಗೂ ಸಾಧ್ಯವಾಗುವುದಿಲ್ಲ. ಅದು ನನ್ನ ಅನುಭವದ ಮಾತು. ಈ ಸಭೆಗೆ ಬರುವುದಕ್ಕೆ ಮುಂಚೆ ಈ ತಿಂಗಳು 15ನೆಯ ತಾರೀಖು ಈ ಸಂಬಂಧವಾಗಿ ನಾನು ಸಿವಿಲ್ ಕೋರ್ಟಿಗೆ ಹೋಗಿ, ಬಿಟ್ಟು ಹೋಗಿದ್ದ ಇನಿಷಿಯಲ್ಲನ್ನು ಹಾಕಿಸ ಬೇಕಾಯಿತು. ಇನ್ನು ಕೆಲವು ಕಡೆ ಅಪ್ಲಿಕೇಷ್ಟ್ ಫಾರಂಗಳೇ ಸಿಕ್ಕುತ್ತಿಲ್ಲ. ಫಾರಂಗಳ ಅಭಾವದಿಂದ ಕೆಲವು ಲಾಯರುಗಳಿಗೂ ನಾನೇ ಫಾರಂ ಕೊಡ ಬೇಕಾಗಿ ಬಂತು. ಈಗ ಈ ಬಗ್ಗೆ ಕೊಟ್ಟಿರುವ ಕಾಲಾ ವಧಿಯನ್ನು ಒಂದು ತಿಂಗಳು ಹೆಚ್ಚು ಮಾಡಿದ್ದಾರೆಂದು ಕಮಿಷನರಿಂದ ತಿಳಿದು ಬಂದಿವೆ. ಆದ್ದರಿಂದ ಈ ಅನಾನುಕೂಲಗಳನ್ನು ಸರಿಪಡಿಸುವುದಕ್ಕೆ ಅವಕಾಶ ವಿದೆ. ದಯವಿಟ್ಟು ರೆವೆನ್ಯೂ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಬಿಟ್ಟಿರುವುದನ್ನು ಪತ್ತೆ ಮಾಡಿ ರಿವೈಸಿಂಗ್ ಅಧಿಕಾರಿಗಳಿಗೆ ತಿಳಿಸುವುದೇ ಅಲ್ಲದೆ ಸಾಧ್ಯವಾದರೆ ಕಮಿಷನರಿಗೂ ತಿಳಿಸಿ ಎಲ್ಲವನ್ನೂ ಸೇರಿಸಿ ಇನ್ನೂ ಒಂದು ತಿಂಗಳ ಕಲಾವಧಿಯನ್ನು ಕೊಡುವಂತೆ ಏರ್ಪಾಡು ಮಾಡಿದರೆ ಬಹಳ ಸಹಾಯ ಮಾಡಿದ ಹಾಗಾಗುತ್ತದೆ. ಅದಕ್ಕೆ ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ಅನೇಕ ಕಡೆ ನಿಮ್ನ ವರ್ಗದವರ ಹೆಸರು ಗಳೂ ಬಿಟ್ಟು ಹೋಗಿವೆ. ಸೂಚನೆ ಕೊಡುವಾಗ ಈ ವಿಚಾರದಲ್ಲಿ ಸರಿಯಾದ ತಿಳಿವಳಿಕೆ ಕೊಟ್ಟು ಸಹಾಯ ಮಾಡಬೇಕು.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈ ವಿಚಾರ ದಲ್ಲಿ ತಾವೇನು ಮಾಡಿದ್ದೀರಿ ?

ಶ್ರೀ ಎಂ. ಮಾದಯ್ಯನವರು.—ನಾವು ಓಟರುಗಳ ಪಟ್ಟಿಯನ್ನು ನೋಡಿ ಅನೇಕ ಗ್ರಾಮಗಳಲ್ಲಿ ಬಿಟ್ಟು ಹೋಗಿರುವ ಹೆಸರುಗಳನ್ನು ಪತ್ತೆ ಹಚ್ಚಿ ಅವನ್ನು ಸೇರಿಸಲು ಕೈಲಾದ ಸಹಾಯ ಮಾಡಿದ್ದೇನೆ. ಸಾರ್ವ ಜನಿಕರಲ್ಲಿ ಈ ವಿಚಾರ ತಿಳಿದಿರುವವರು ಸಹಾಯ ಮಾಡುತ್ತಿದ್ದಾರೆ. ಆದರೆ ಅನೇಕರಿಗೆ ಅರ್ಜಿ ಹಾಕಿ ಕೊಳ್ಳುವುದು ಮತ್ತು ಅರ್ಜಿ ಭರ್ತಿ ಮಾಡುವುದು ಗೊತ್ತಿಲ್ಲವಾದ್ದರಿಂದ ಸರ್ಕಾರದವರು ಅಧಿಕಾರಿಗಳಿಗೆ ತಿಳಿಸಿ ಸಹಾಯ ಮಾಡಿದರೆ ಎಷ್ಟೋ ಅನುಕೂಲವಾಗು ತ್ತದೆ. ಆ ರೀತಿ ಮಾಡಬೇಕ .

ಚೇರ್ಮನ್‌ರು (ಮಾನ್ಯ ಶ್ರೀ ಎಸ್. ರಂಗರಾಮಯ್ಯನವರು).—ಈ ಫಾರಂಗಳನ್ನು ಗ್ರಾಮಸ್ಥರಿಗೆ ಹೇಗೆ ಒದಗಿಸಬೇಕೆಂದು ತಾವು ಅಭಿಪ್ರಾಯಪಡುತ್ತೀರಿ?

ಶ್ರೀ ಎಂ. ಮಾದಯ್ಯನವರು.—ತಾಲ್ಲೂಕು ಆಫೀಸುಗಳಲ್ಲಿ ಫಾರಂಗಳು ಸಿಕ್ಕುತ್ತವೆಂಬುದನ್ನು ಚೆನ್ನಾಗಿ ಪ್ರಚಾರ ಮಾಡಿ ಹಳ್ಳಿಗಳಿಗೂ ತಿಳಿಯುವಂತೆ ಮಾಡಬೇಕು. ರೆವೆನ್ಯೂ ಅಧಿಕಾರಿಗಳಾದ ಸಬ್ ಡಿವಿಜ಼ನ್ ಆಫೀಸರು ಮತ್ತು ಅಮಲ್ದಾರರು ರೆವೆನ್ಯೂ ಇನ್‌ಸ್ಪೆಕ್ಟರು, ಪಟೇಲ್ ಶ್ಯಾನುಭೋಗರು ಮುಂತಾದವರ ಸಹಾಯವನ್ನು ತೆಗೆದುಕೊಂಡು ಮುತುವರ್ಜಿ ವಹಿಸಿ ಫಾರಂಗಳನ್ನು ಬೇಕಾದವರಿಗೆ ಒದಗಿಸಿ ಬಿಟ್ಟುಪೋಗಿರುವುದನ್ನು ನೋಡಿನಲು ತಕ್ಕ ಸಹಾಯಮಾಡುವಂತೆ ಏರ್ಪಾಡಾದರೆ ಬಹಳ ಒಳ್ಳೆಯದು.

Sri A. BHEEMAPPA NAIK (Chitaldrug District—General).—I want to mention one point. These forms must be made available to the villagers. There is a dearth of forms in the villages. They have got to go to taluk headquarters for this purpose. Arrangements may therefore be made to supply each village with sufficient number of forms. The Patel or the Shanbogue may be allowed to have these forms with him for distribution to the villagers. If the persons go to them they must be asked to write down the whole thing for the villagers and the villagers must be properly instructed as to where to present them. In fact sufficient number of forms are not available in the villages. They give one form and ask us to copy the whole thing on white paper. It is a difficult task for the villager to write out the form himself and then fill it up. Therefore I suggest that sufficient number of forms may be made available either through the Patel or the Shanbogue or the School Masters or some one in the village. The illiterate villagers must be helped to fill up the forms properly and they must be told to whom and where it should be presented. Such methods must be adopted to help the villagers out of the difficulty.

*Janab **MOHAMED IMAM** (Chitaldrug *cum* Tumkur—Muslim).—I have one more suggestion to offer in this connection. The people in the villages have not at all understood the procedure in this connection. They want some time to understand the procedure. So proper publicity in this behalf is absolutely necessary.

Secondly, some agent must be appointed in a village or group of villages to receive these forms and somebody must be appointed to help the villagers to fill up the forms which are in English or in Kannada as most of the villagers are illiterate and do not know either English or Kannada. So some arrangements must be made in some convenient centres to help the villagers to give them necessary instruction to fill up the forms.

Sri M. V. KRISHNAPPA (Kolar District—General).—The opposition party may as well take the initiative in these matters.

Janab MOHAMED IMAM.—When you go to the back-ground, I will take it up.

The time for filing objections must be further extended. As at present it is only up to 15th of February 1951. This time is not enough. The Government of India have got to be approached and the Election Commissioner must be appraised of the local conditions and difficulties and they must be requested to extend the last date for filing objections. People have not yet understood the procedure and there is confusion in their minds still. I myself was not able to follow the procedure for some time. Many are under the impression that applications are to be presented to the Amildar and not to the Munsiff who is the revising authority. So the procedure has got to be made clear and easily understandable. Complications and confusions must be cleared. There must be wide publicity in this behalf. A special officer must be appointed to instruct the villagers as to how these forms should be filled up etc. You can give publicity to all these things. Please help every villager in filing up these forms and appoint the necessary authorities to receive these forms and what is more please take action and see that time is extended by at least one or two months more. In the case of the enquiry officer, he cannot ask the poor villagers to go to Munsiff's courts. I therefore suggest

*Speech not revised by the Member.

that an officer appointed for this purpose should be able to go himself round the villages. I wish a separate officer of the status of Munsiff or any judicial officer is appointed for this work, instead of burdening the already over-burdened Munsiff.

The Hon'ble Sri K. CHENGALA-RAYA REDDY.—One officer for the whole State?

Janab MOHAMED IMAM.—If we should cast these duties also upon a Munsiff who has duties unlimited and who is already burdened enough and more, we cannot expect him to have enough time and patience to attend to this work. Besides, the Munsiff will not be able to leave his headquarters because he is always busy with his own cases. The only alternative is for the prospective applicant to go to the Munsiff's court or appoint an agent or lawyer which means a lot of expenditure to the poor raiyat. So, I suggest that Government may even now appoint a separate revising authority, either one officer for one district or two officers for one district as circumstances demand and let him attend to this only. Let him not be burdened with any other responsibility. It may be in the nature of a temporary post.

These are my suggestions which I am placing before the Government and I say if it is possible please take action. If it is necessary; please move the Government of India and the Election Commissioner. Please do it as our trustees and as our accredited and authorised agents.

ಶ್ರೀ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಈ ವಿಚಾರದಲ್ಲಿ ನಾನು ಒಂದೆರಡು ಸೂಚನೆಗಳನ್ನು ಕೊಡಬೇಕೆಂದಿಟ್ಟಿಸುತ್ತೇನೆ. ಪ್ರಕಟಣೆ ಮಾಡಿದರೆ ಗ್ರಾಮಗಳ ಜನರಿಗೆ ತಿಳಿಯುವುದು ಕಷ್ಟ. ಆದುದರಿಂದ ಪ್ರತಿಯೊಂದು ಗ್ರಾಮದಲ್ಲಿಯೂ ಟಾಂ ಟಾಂ ಹೊಡೆಸಿ ತಿಳಿಸುವ ಪದ್ಧತಿ ಒಳ್ಳೆಯದು.

The Hon'ble Sri K. T. BHASHYAM.—Please see the circular, you will see that :

"a regular mahazar of the fact of publication in the village etc. etc., publication announced by beat of *tom tom*."

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ಒಂದು ತಿಂಗಳು ಮುಂದುವರಿಸಿದ್ದಾರೆ. ಚುನಾವಣೆಯ ಕಾರ್ಯಕ್ರಮದ ವೇಳಾ ಪಟ್ಟಿಯನ್ನು ನೋಡಿದರೆ ಗೊತ್ತಾಗುತ್ತದೆ. ಫೆಬ್ರುವರಿ 15ರವರೆಗೆ ಅವಕಾಶ ಇತ್ತು. ಆಗ ಚುನಾವಣೆ ಏಪ್ರಿಲ್ ಸುಮಾರಾಗಿತ್ತು. ಈಗ ಚುನಾವಣೆ ನಡೆಯುವುದು ನವೆಂಬರ್ ಅಥವ ಡಿಸೆಂಬರ್, ಸುಮಾರು ಹತ್ತು ತಿಂಗಳಿರುತ್ತದೆ. It is not usual to include one's name or to withdraw. This big interval is not necessary, and time can be given. The date of filing objection can as well be postponed by two or three months even.

ನಮ್ಮ ಹಳೆಯ ಚುನಾವಣಾ ವೇಳಾ ಪಟ್ಟಿಯನ್ನು ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಇಷ್ಟು ದಿವಸ ಅವಕಾಶ ಎಂದು ನಮೂದಾಗಿರುತ್ತದೆ. ಹಿಂದೆ ಇಷ್ಟು ದೀರ್ಘ interval ಇರುತ್ತಿರಲಿಲ್ಲ. ಹಿಂದೆ ನಮ್ಮಲ್ಲಿ ಮಾರ್ಚ್ ಅಥವ ಏಪ್ರಿಲ್‌ನಲ್ಲಿ ಚುನಾವಣೆ ನಡೆಯುತ್ತಿತ್ತು.....

The Hon'ble Sri K. T. BHASHYAM.—There is no need to argue with us because we shall see our members want extension of time. You need not persuade us.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—We have to persuade you and you have to persuade the Government of India.

ಇನ್ನೊಂದು ಏನೆಂದರೆ, ಡೀಲಿಮಿಟೇಷ್ನ್ ಕಮಿಟಿಯ ಶಿಫಾರಸು ನಮಗೆ ತಿಳಿದಿದ್ದರೆ ನಮ್ಮ ಯಾವ ಯೂನಿಟ್ಟಿನಲ್ಲಿಯಾವ ಕ್ಷೇತ್ರದಿಂದ ಚುನಾವಣೆಗೆನಿಂತುಕೊಳ್ಳಬಹುದೆಂದು ಯೋಚನೆಮಾಡಲು ಅವಕಾಶವಿರುತ್ತಿತ್ತು, ಒಂದು choice ಸಿಕ್ಕುತ್ತಿತ್ತು. ಆ ಶಿಫಾರಸು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಮುಂಚಿತವಾಗಿಯೇ ಬರಬೇಕಾಗಿತ್ತು, ಬಂದಿದ್ದರೆ ನಾವು ಬೇಕಾದರೆ ಬದರಾವಣೆ ಮಾಡಿಕೊಳ್ಳುವುದಕ್ಕೂ ಅನುಕೂಲವಾಗುತ್ತಿತ್ತು. ಈಗ ನನ್ನ ಉದಾಹರಣೆಯನ್ನೇ ತೆಗೆದುಕೊಂಡರೆ ಹಾಸನ ಜಿಲ್ಲೆಯಲ್ಲಿ ಹಾಸನತಾಲ್ಲೂಕಿನಲ್ಲಿ ಚುನಾವಣೆಗೆ ನಿಂತುಕೊಳ್ಳಲೋ ಎಂಬುದು ಅಥವಾ ಬೆಂಗಳೂರಿನಲ್ಲೇ ನಿಂತುಕೊಳ್ಳಲೋ ಗೊತ್ತಾಗುವುದಿಲ್ಲ. I cannot vote though I stand as a candidate from Hassan District. I am anxious to record my vote also.

ಆ ಸಮಿತಿಯ ಶಿಫಾರಸು ಯಾವುದೂ ಗೊತ್ತಾದರೆ we can exercise our choice whether we should get our names included in this unit or that.

The Hon'ble Sri K. CHENGALA-RAYA REDDY.—You can stand from any constituency.

Sri H. B. GUNDAPPA GOWDA.—I want to exercise my vote also. ಅದಕ್ಕೇ ನಾನು ಹೇಳುವುದು, ಡೀಲಿಮಿಟೇಷ್ನ್ ಕಮಿಟಿ ವರದಿ ಬಂದರೆ ಜನರಿಗೆ choice ಕೊಡಲು ಅನುಕೂಲವಾಗುತ್ತದೆ, ಯಾವ ಯೂನಿಟ್‌ನಲ್ಲಿ ನಿಲ್ಲಬಹುದೆಂದು ಗೊತ್ತಾಗುತ್ತದೆ. ಈಗ ಅನುಮಾನವಾಗುತ್ತದೆ. ಆದುದರಿಂದ ಆ ಸಮಿತಿಯವರ ವರದಿ ಬಂದ ಮೇಲೆ, ಅದು ಜನರಿಗೆ ತಿಳಿದಮೇಲೆ ಒಂದು ಅವಕಾಶಕೊಟ್ಟರೆ ಅನುಕೂಲವಾಗುತ್ತದೆ. ಈಗ ಎರಡು ಸಮಿತಿಗಳು ಕೆಲಸ ಮಾಡಿರುವುದರಿಂದ ನಮಗೆ ಅನುಮಾನ ಬಂದಿದೆ. ಈ ನಡೆಯಿಂದ ರಚಿತವಾದ ಸಮಿತಿಯೊಂದೇ ಆಗಿದ್ದರೆ ಚಿಂತೆಯಿಲ್ಲ, ಚೆನ್ನಾಗಿತ್ತು.

ಶ್ರೀ ಎಲ್. ಸಿದ್ದಪ್ಪನವರು.—ಸದ್ಯ ಹಾಗಿಲ್ಲದಿರುವುದೇ ಕ್ಷೇಮ!

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ಇಬ್ಬರು ಯಜಮಾನರಾಗಿದ್ದಾರೆ, ಆದೇ ಕಷ್ಟ. ಅಂತೂ ಡೀಲಿಮಿಟೇಷನ್ ಕಮಿಟಿಯವರ ಶಿಫಾರಸಿನ ಮೇಲೆ ಏನಾಗಿದೆ ಎಂಬುದು ತಿಳಿದ ಮೇಲೆ ಸ್ವಲ್ಪ ಅವಕಾಶ ಕೊಡುವುದು ಸೂಕ್ತ.

ಶ್ರೀ ಎಲ್. ಸಿದ್ದಪ್ಪನವರು.—ಒಂದು ಲೋಕಲ್ ಯೂನಿಟ್‌ನಿಂದ ಇನ್ನೊಂದಕ್ಕೆ ವರ್ಗವಾಡಿ ಎಂದು ಕೇಳುವುದಾದರೆ, ಒಂದೇ ಯೂನಿಟ್‌ನಲ್ಲಿ ಒಂದು ಗ್ರಾಮದಿಂದ ಇನ್ನೊಂದಕ್ಕೆ ವರ್ಗಮಾಡಿಕೊಡಿ ಎಂದು ಕೇಳುವುದಕ್ಕೆ ಅವಕಾಶವಿಲ್ಲವೇ!

*Janab SYED ABDUR RAHMAN (Kadur *cum* Shimoga—Muslim).—Sir, inclusion of fresh names in the electoral rolls is certainly bristling with many difficulties. I agree with all the Hon'ble Members who have given very valuable suggestions in this regard and I hope that these suggestions will be given due consideration. When I myself went through the procedure to get some fresh names included in the list of electoral rolls, I found that there are lots of difficulties which cannot easily be overcome. It certainly requires time and patience. When the illiterate adult tries to exercise his vote, first of all he finds it difficult to get his name included in the list. Inclusion of names in the list is a very tough job and I find it very difficult. I think 75 per cent of names are left out. It is clear because they are not complete record of all the names of adults. Some more names have got to be added, because I know that my Hon'ble friends Sri L. Siddappa and Janab Imam have been taking such a lot of interest in this matter; they have found out that many many names are not at all included in the electoral rolls.

Even if they want their names to be included in the electoral rolls they find it very difficult because the procedure is so elaborate that an illiterate man finds it difficult to fill up the form and give it to the concerned authority or the Returning Officer.

Another suggestion made by the Hon'ble Janab Mohamed Imam is that there are voters who have not been included in the rolls and that even with regard to those included in the list, they know neither English nor Kannada and so it is better that the electoral rolls are printed in other languages also, preferably Urdu, because in India all the electoral rolls are published in Hindustani. It is a fundamental right which cannot be lost. If we want that all such persons should exercise their right of franchise, they must be given all the necessary facilities with regard to that in Mysore State where there has been a practice all along to publish electoral rolls in Urdu also.

Sri H. B. GUNDAPPA GOWDA.—Was it being done?

Janab SYED ABDUR RAHMAN.—Yes. It is a fact that such a thing existed for so many years. I am not giving any wrong information because I have myself used it.

The Hon'ble Sri K. T. BHASHYAM.—I have been in public life for thirty years and I have never seen electoral rolls at any rate in Bangalore City, printed in Urdu. All of it is in Kannada.

Janab SYED ABDUR RAHMAN.—That is a fact which cannot be challenged.

The Hon'ble Sri K. T. BHASHYAM.—I am challenging it.

Janab SYED ABDUR RAHMAN.—I can produce electoral rolls which are published in Urdu.

The Hon'ble Sri K. T. BHASHYAM.—The Hon'ble Member may do it.

Janab MAHMOOD SHARIFF (*Mysore* cum *Mandya* cum *Hassan-Muslim*).—May I intervene, Sir? What my Honb'le friend Sri K. T. Bhashyam said that the electoral roll is not published in Urdu is not correct. I request him to verify.

The Hon'ble Sri K. T. BHASHYAM.—May I submit one thing, sir? We had what was known as separate electorates for Muslims. Since the electorates concerned were only Muslims, the electoral rolls were printed in Urdu. We are not talking of those days. We have now joint electorates and we cannot print the electoral rolls in three or four languages.

*Speech not revised by the Member.

Janab MAHMOOD SHARIFF.—Whatever may be the reason it has been a fact.

The Hon'ble Sri K. T. BHASHYAM.—Never in a joint electorate.

Janab SYED ABDUR RAHMAN.—As we had it in Mysore, these rolls have been published in Urdu.

Janab MOHAMED HANIEF (Bangalore Muslim).—What is the implication of this? There are certain sets of people who do not, rightly or wrongly, know either English or Kannada. But they have a right to exercise their vote. What facilities do the Government propose to give them?

Sri H. B. GUNDAPPA GOWDA.—Coloured box.

Janab MOHAMED HANIEF.—It is for an illiterate man. Anyway that is a question for consideration.

The Hon'ble Sri H. C. DASAPPA (Minister for Finance and Industries).—For that matter there are persons who do not know any language.

Janab MOHAMED HANIEF.—Find out some method by which they too may exercise their vote. Otherwise, you will be depriving those persons of their right to exercise their vote. Do not talk of expenses or practical difficulties. It is the duty of the Government to see that the object in the constitution is satisfied, namely, that every adult shall have the opportunity to vote. What facilities do you propose to give to a man who does not know either Kannada or English?

Sri V. S. NARAYANA RAO (Bangalore City —General).—In certain areas it has been published in English even this time.

The Hon'ble Sri K. T. BHASHYAM.—What follows from that? What is the object of bringing it to your notice? In Kolar Gold Field there are a large number of Europeans and they wanted it in a particular language in that particular place.

Janab SYED ABDUR RAHMAN.—Sir, the question of joint or separate electorates does not arise. It is a question of exercising franchise. I hope the Hon'ble Minister will very kindly bear this in mind.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಸದನ್ಯರು ಸೂಚಿಸಿರತಕ್ಕ ವಿಚಾರಗಳೆಲ್ಲವೂ ಕೂಡ ಸೂಕ್ತವಾಗಿವೆ. ಅವುಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬಹುದಾಗಿದೆ. ಆದರೆ ಎಷ್ಟು ಭಾಗ ಸಫಲವಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಈಗ ಕೊಟ್ಟಿರತಕ್ಕ ಕಾಲಾವಕಾಶವನ್ನು ಫೆಬ್ರವರಿ 15ರಿಂದ ಮುಂದುವರಿಸಬೇಕೆಂದು ಕೇಂದ್ರ ಸರ್ಕಾರದವರಿಗೆ ಬರೆಯುತ್ತೇವೆ. ಬೇಕಾದರೆ ಶಿಫಾರಸ್ಸು ಕೂಡ ಮಾಡುತ್ತೇವೆ. ಆದರೆ ಎಷ್ಟುಮಟ್ಟಿಗೆ ಅದು ನೆರವೇರುತ್ತದೆ ಎಂಬುದನ್ನು ಹೇಳಲಾರೆ. ಈಗಾಗಲೇ ಅವರು ಮೊದಲುಕೊಟ್ಟ ಕಾರಾವಧಿ ಮುಗಿದು ಹೋಗಿದೆ. ಡಿಸೆಂಬರ್ 31ಕ್ಕೆ ಮುಗಿಸಬೇಕಾಗಿತ್ತು. ಅದನ್ನು ಜನವರಿ ಕೊನೆಯವರೆಗೂ ಮುಂದುವರಿಸಿದ್ದರು. ಪುನಃ ಫೆಬ್ರವರಿ 15ಕ್ಕೆ ಎರಡನೆಯ ಸಾರಿ ಮುಂದುವರಿಸಿದ್ದಾರೆ. ಆದ್ದರಿಂದ ಮತ್ತೊಂದು ಸಾರಿ ಕಾರಾವಕಾಶ ಕೊಡಿ ಎಂದರೆ ಕೊಡುತ್ತಾರೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಶ್ರೀ ಗುಂಡಪ್ಪ ಗೌಡರು ಹೇಳಿದಹಾಗೆ ಚುನಾವಣೆ ನಡೆಯುವುದಕ್ಕೆ ಇನ್ನೂ ವಿಶೇಷ ಕಾಲಾವಧಿ ಇದೆ. ಆದ್ದರಿಂದ ಇದನ್ನು ಮುಂದುವರಿಸಿದರೂ ತೊಂದರೆಯಾಗುವುದಿಲ್ಲ ಎಂಬ ಒಂದು ವಿಚಾರವನ್ನು ಅವರ ಗಮನಕ್ಕೆ ತರಬಹುದಾಗಿದೆ, ತರುತ್ತೇವೆ. ಎರಡನೆಯದಾಗಿ, ...

ಜನಾಬ್ ಜೆ. ಮಹಮದ್ ಇಮಾಂರವರು.—ಈ ಅಭಿಪ್ರಾಯ 80 ಲಕ್ಷ ಜನಗಳ ಪ್ರತಿನಿಧಿಗಳಿಂದ ಬಂದಿದೆ ಎಂದು ತಿಳಿಸಿ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಭೆಯಲ್ಲಿ ಕೆಲವರು ಈ ರೀತಿ ಅಭಿಪ್ರಾಯಪಟ್ಟರು. ಇದು ಸೂಕ್ತವಾಗಿ ಕಾಣುತ್ತದೆ ಎಂದು ಹೇಳಬಲ್ಲೆವು.

ಜನಾಬ್ ಜೆ. ಮಹಮದ್ ಇಮಾಂರವರು.—ಇದು ಕೆಲವು ಸದನ್ಯರ ಅಭಿಪ್ರಾಯ ಅಲ್ಲ, ಎಲ್ಲಾ ಸದಸ್ಯರ ಅಭಿಪ್ರಾಯ. ಬೇಕಾದರೆ ಇನ್ನೊಂದುಸಾರಿ ಎಲ್ಲರ ಅಭಿಪ್ರಾಯವನ್ನೂ ಕೇಳಿ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎರಡನೆಯದಾಗಿ ಹಳ್ಳಿಗಳಲ್ಲಿ ಈ ಫಾರಂ ಸಿಕ್ಕುವಹಾಗೆ ಮಾಡಬೇಕೆಂದು ಹೇಳಿದ್ದಾರೆ. ಕೈರಾದಮಟ್ಟಿಗೂ ಅದನ್ನು ಮಾಡಿಸುತ್ತೇವೆ. ಈಗ ತಾಲ್ಲೂಕು ಆಫೀಸುಗಳಲ್ಲಿ ಸಿಕ್ಕುವಹಾಗೆ ಏರ್ಪಾಡು ಮಾಡಿದ್ದೇವೆ. ಹಳ್ಳಿಗಳವರಿಗೂ ಸಿಕ್ಕುವಂತೆ ಮಾಡುತ್ತೇವೆ. 80 ಸಾವಿರ ಫಾರಂಗಳು ಪ್ರಿಂಟಾಗಿವೆ. ಎಲ್ಲೆಲ್ಲಿ ಹೆಚ್ಚು ಫಾರಂಗಳ ಬೇಕಾಗುತ್ತವೆ ಎಂದು ವರದಿ ಬರುತ್ತದೆಯೋ ಆ ಕೂಡಲೇ ಕಳುಹಿಸುತ್ತೇವೆ. ಆ ಫಾರಂ ಭರ್ತಿ ಮಾಡುವ ವಿಷಯದಲ್ಲೂ ಯಾವ ತೊಂದರೆಯೂ ಕಾಣಿಸುತ್ತ ಇಲ್ಲ. ಏಕೆಂದರೆ ನಾಲ್ಕು ಕಾಲಂ ಭರ್ತಿ ಮಾಡಬೇಕು. ತನ್ನ ಹೆಸರು, ತಂದೆ ಹೆಸರು, ವಯಸ್ಸು, ಗಂಡಸೇ, ಹೆಂಗಸೇ—ಇಷ್ಟನ್ನು ತಿಳಿಸಿದರೆ ಸಾಕು. ಅದನ್ನು ತಿಳಿಸುವಾಗಲೂ ಸ್ವಲ್ಪ ಹೆಚ್ಚುಕಡಿಮೆ ಆದರೆ ವಜಾ ಮಾಡುತ್ತಾರೋ ಏನೋ ಎಂದು ಶ್ರೀ ಸಿದ್ಧಪ್ಪನವರು ಶಂಕೆಪಟ್ಟರು. ಆರೀತಿ ಮಾಡುವುದಿಲ್ಲ. ರಿವೈಸಿಂಗ್ ಅಥಾರಿಟಿಗೆ ಕಳುಹಿಸುತ್ತಾರೆ. ಅವರು ವಿಚಾರಣೆ ಮಾಡಿ ಅಂಥವರ ಹೆಸರನ್ನು ಈ ಪಟ್ಟಿ ಒಳಗೆ ಸೇರಿಸತಕ್ಕದ್ದು ನ್ಯಾಯವೇ, ಅಲ್ಲವೇ ಎಂಬುದನ್ನು ವಿಮರ್ಶೆ ಮಾಡಬಹುದು. ಅದಕ್ಕೆ ಬೇಕಾದರೆ ಮಾನ್ಯ ಸದನ್ಯರು ಸೂಚಿಸುವಹಾಗೆ ಒಂದು ಸರ್ಕ್ಯುಲರ್ ಕಳುಹಿಸಿ ಕೊಡುತ್ತೇವೆ. Any person may like to be in any electoral unit other than the one in which his name appears. We will circularise the authorities and they will look into the matter.

ಶ್ರೀ ಎಲ್. ಸಿದ್ದಪ್ಪನವರು.—ಹಾಗಲ್ಲ ಒಂದು ಗ್ರಾಮದಲ್ಲಿದ್ದವರು ಮತ್ತೊಂದು ಗ್ರಾಮಕ್ಕೆ ಹೋಗಿ .....

The Hon'ble Sri K. T. BHASHYAM.—If there is no legal objection it will have to be considered. We will circularise the authorties to give as far as possible effect to such desires on the part of the voters.

ಇನ್ನು ಮುನ್‌ಸೀಫರು ಇರುವ ಸ್ಥಳದಲ್ಲೇ ತನಿಖೆ ಮಾಡುವುದರಿಂದ ತೊಂದರೆ ಆಗಬಹುದು, ಆದ್ದರಿಂದ ಗ್ರಾಮಾಂತರಗಳಿಗೆ ಹೋಗಿ ತನಿಖೆ ಮಾಡುವ ಹಾಗೆ ಏರ್ಪಾಡು ಮಾಡಬೇಕೆಂದು ಹೇಳಿದರು. ಅಂಥ ಪ್ರಮೇಯ ಇದುವರೆಗೂ ಬಂದಿಲ್ಲ. ಆದೇ ರೀತಿ ಮಾಡಬೇಕೆಂದು ಇಕ್ಸ್‌ಪ್ರೆಷ್ ಇದೆ. ಆದರೆ ಒಂದು ಗ್ರಾಮದಲ್ಲಿ ಒಬ್ಬರು ಅಥವಾ ಇಬ್ಬರು ಇದ್ದರೆ ಅಲ್ಲಿಗೇ ಹೋಗಿ ತೀರ್ಮಾನ ಮಾಡುವುದಕ್ಕಾಗುವುದಿಲ್ಲ. 50 ಅಥವಾ 100 ಜನ ಇದ್ದರೆ ಆಗಬಹುದು. The Munsiff will go there and enquire into the matter. This is a matter of discretion depending upon the circumstances in each case.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ರಿವಿಜಿಟ್, ಆಥಾರಿಟಿ ಮುನ್‌ಸೀಫ್ ಮ್ಯಾಜಿಸ್ಟ್ರೇಟ್ ಇರಬೇಕೆಂದು ಡೈರೆಕ್ಷನ್ ಬಂದಿದೆಯೇ?

ಮಾನ್ಯ ಶ್ರೀ ಕೆ ಟಿ. ಭಾಷ್ಯಂರವರು.—ಹೌದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ರೆವೆನ್ಯೂ ಆಫೀಸರಾಗಿದ್ದರೆ ಈ ರೀತಿಯಾಗಿ ಹೆಸರುಗಳನ್ನು ಸೇರಿಸುವುದು ಸುಲಭವಾಗುತ್ತಿತ್ತು.

The Hon'ble Sri K. T. BHASHYAM.—It would have been very easy. But we had definite directions that we had to recommend only judicial officers as revising authorities. ಈ ಪ್ರಕಾರ ಕೈಲಾದಮಟ್ಟಿಗೂ ಸಾಸೂತ್ರವಾಗಿ ಕೆಲಸ ನಡೆಯುವುದಕ್ಕೆ ಎಷ್ಟು ಮಾಡಬೇಕೋ ಅಷ್ಟೂ ಮಾಡಿದ್ದೇವೆ. Claims ಮತ್ತು Objections ಯಾರು ಬೇಕಾದರೂ ರಿವೈಸಿಂಗ್ ಆಫೀಸರಿಗೆ ಕೊಡಬಹುದೆಂದಿದೆ. ಅದಕ್ಕೂ, ಎಲ್ಲಾ ಜನರೂ ಅವರನ್ನು ಭೇಟಿ ಮಾಡಲು ಸಾಧ್ಯವಾಗದಿರಬಹುದೆಂದು ಭಾವಿಸಿ ಚುನಾವಣಾ ರಿಜಿಸ್ಟ್ರೇಷನ್ ಅಧಿಕಾರಿಗಳನ್ನೇ ಅಗಲ ಇಲ್ಲವೇ ಅವರ್ಯಾರಿಗೇ ಅಗಲ ಕೊಡಬಹುದೆಂದು ಹೇಳಿರುವುದಲ್ಲದೆ, ತಾನೇ ಅಲ್ಲಿಗೆ ಹೋಗದೆಯೂ ಕೇವಲ ಬರೆದು ರುಜು ಮಾಡಿ ಅವರ ವಿಳಾಸಕ್ಕೆ ಪೋಸ್ಟ್ ಮಾಡಿಬಿಟ್ಟರೂ ಸಾಕೆಂದು ಹೇಳಿದ್ದೇವೆ. ಇಷ್ಟು ಕೂಡ ಅವಕಾಶಗಳನ್ನು ಕಲ್ಪಿಸಿದ್ದೇವೆ. ಇನ್ನೊಂದೇನೆಂದರೆ, ಚುನಾವಣಾ ರಿಜಿಸ್ಟ್ರೇಷನ್ ಅಧಿಕಾರಿಗಳನ್ನು ತಮ್ಮ ಪ್ರಿಫಾರಸು ಮಾಡಿ ಕಳುಹಿಸಿಕೊಡಬಹುದೆಂದು ಹೇಳಿದೆ. ಇಂಥಾದ್ದು ಒಂದೆಲ್ಲದೆ ಹತ್ತಾರು ಇದ್ದರೂ ಅವರು ಈ ಪ್ರಕಾರ ಕಾರ್ಯಕ್ರಮ ಕೈಕೊಳ್ಳಬಹುದು. ಕೆಲಸ ನಡೆಯುವುದು ಮುಖವೆಂದು ಭಾವಿಸಿದ್ದೇವೆಯೇ ಹೊರತು ಕಟ್ಟುನಿಟ್ಟಾದ ನಿಯಮಗಳೇನೂ ಇಲ್ಲ. It is all a matter of working it easy; not a matter of hard and fast rule.

Sri L. SIDDAPPA.—I think there is some misapprehension on the part of the Electoral Officers. Clear instructions may be issued by Government.

The Hon'ble Sri K. T. BHASHYAM.—In view of the apprehensions expressed by the Hon'ble Members we will send another circular to the Electoral Registration Officers in this matter. Supposing a villager brings to his notice any mistake even without form; the Officer can make a recommendation. After all in working democracy we have to adjust ourselves. Let us not say 'You have not put a comma here, a semi-colon there, We will issue a circular in this matter as desired by the Hon'ble Members.

Then, so far as knowledge on this matter is concerned, we have from time to time brought to the notice of all and if we get further extensions of time, we will give notice by *tom tom* and every villager will come to know of these details.

ಆ ಮೇರೆ ಉರ್ದುವಿನಲ್ಲಿ ಈ ವೋಟರುಗಳ ಪಟ್ಟಿಯನ್ನು ಮುದ್ರಿಸಿ ಪ್ರಕಟಿಸಬೇಕೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಅದು ಸಾಧ್ಯವಲ್ಲದ್ದು. ಏಕೆಂದರೆ ಉರ್ದುವಿನಲ್ಲಿ ಮುದ್ರಿಸುವುದಕ್ಕೆ ಹೊರಟೆವೆಂದರೆ ಮಿಕ್ಕ ಎಲ್ಲಾ ಭಾಷೆಗಳಲ್ಲೂ ಮುದ್ರಿಸಿ ಎಂದು ಹೇಳಬಹುದು. ಈಗ ಒಂದು ಸಾರಿ ಮುದ್ರಿಸುವುದಕ್ಕೆ 4 ಲಕ್ಷ 10 ಸಾವಿರ ರೂಪಾಯಿಗಳ ಖರ್ಚಾಗಿದೆ. ಉರ್ದುವಿನಲ್ಲಿ ಮಾಡುವುದಕ್ಕೆ ಇನ್ನು ನಾಲ್ಕು ಲಕ್ಷ ಬೇಕಾಗುತ್ತದೆ. ಕೆಲವರಿಗೆ ಕನ್ನಡ ಗೊತ್ತಾಗುವುದಿಲ್ಲವೆಂದು ಹೇಳಿ ಉರ್ದುವಿನಲ್ಲಿ ಮಾಡಿ ಎಂದೇನೋ ಹೇಳಿದಿರಿ. ಹಾಗಾದರೆ ಯಾವ ಭಾಷೆಯೂ ಓದಲು ಬರದೆ ಇರುವವರಿಗೇನು ಹೇಳುತ್ತೀರಿ? 80 per cent of them do not know any language! ಅದೇ ರೀತಿ ನಮ್ಮ ಮುಸ್ಲಿಂ ಸಹೋದರರೂ ಕೂಡ ಕೈರಾದ ಮಟ್ಟಿಗೂ ಇದನ್ನೇ ನೋಡಿಕೊಂಡು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅವರೂ ನಂದರ್ಭಾನುಸಾರ ದೇಶವೊಂದಿಗೆ ಕರೆತು ಕೆಲಸಮಾಡಬೇಕಾಗಿದೆ. ಜಂಟಿ ಚುನಾವಣಾ ಪದ್ಧತಿಯಲ್ಲಿ ಇದುವರೆಗೂ ಕೂಡ ಉರ್ದುವಿನಲ್ಲಿ ಚುನಾವಣಾ ವೋಟುದಾರರ ಪಟ್ಟಿಗಳನ್ನು ಮುದ್ರಿಸಿರುವುದನ್ನು ನಾನೆಂದೂ ಕಾಣೆ. ಇವರಂತೆಯೇ ನಾಳೆ ನಮ್ಮ ದೇಶದಲ್ಲರುವ ತೆಲುಗರೂ ತಮಿಳರೂ ಮತ್ತು ಇತರೇ ಭಾಷೆಗಳವರೂ ಕೇಳುವುದಕ್ಕೆ ಪ್ರಾರಂಭಿಸಬಹುದು. ಅದರಂತೆ ಮಾಡುವುದಕ್ಕಾಗುತ್ತದೆಯೇ? With all that, I have full sympathy with the difficulty to which Janab Haneef referred.....

Janab MOHAMED HANIEF.—It is not a question of sympathy, if that is not there, what is the facility you are giving? That is what I am asking. What is it that you are going to do for them? They cannot go to this or that man!

The Hon'ble Sri K. T. BHASHYAM.— What does a villager who doesnot understand any language do? He goes to the neighbour and finds out. ಒಂದು ವೇಳೆ ಹೆಸರಿದೆಯೆ ಎಂದು ನೋಡಿದಾಗ ಹೆಸರಿಲ್ಲದೆ ಇದ್ದರೆ ಅವರೇನು ಮಾಡಬೇಕು ಎಂದು ಅವರು ಕೇಳಿದರು. ಏನು ಕೆಲಸ ನಡೆಸಬೇಕೋ ಅವನ್ನು ನಡೆಸಬೇಕೇ ಹೊರತು ನಮ್ಮನ್ನೆ ಹೇಳುವುದರಿಂದೇನೂ ಪ್ರಯೋಜನವಿಲ್ಲ. ಯಾರನ್ನಾದರೂ ಕೇಳಿ ತಕ್ಕ ಕೆಲಸ ಮಾಡಿದರೆ ಆಗುತ್ತೆ!

Janab SYED ABDUR RAHMAN.—Is that happening now?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು —ಅದಕ್ಕೇನು ಹೇಳಲಿ! ಪ್ರಜಾಪ್ರಭುತ್ವದಲ್ಲಿ ಯಾವಾಗ ಎಲ್ಲರಿಗೂ ವೋಟು ಮಾಡುವ ಅಧಿಕಾರವನ್ನು ಕೊಟ್ಟಿವೋ ಅದರ ಮೇಲೂ ಅವರು ತಮ್ಮ ಅಧಿಕಾರವನ್ನು ಹೇಗೆ ಚಲಾಯಿಸಿಬೇಕೆಂಬುದನ್ನಾದರೂ ಕಲಿಯದೆ ಇದ್ದರೆ ಇನ್ನೇನು ತಾನೆ ಮಾಡುತ್ತಿರಿ? ನಾನೇನೋ ಟಾಂ ಟಾಂ ಮಾಡಿಸಿ 21 ವರ್ಷಕ್ಕೆ ಮೇಲ್ಪಟ್ಟ ಎಲ್ಲಾ ಹೆಂಗಸರೂ ಓಟು ಮಾಡಬಹುದು, ಪಟ್ಟಿಯಲ್ಲಿ ಅವರ ಹೆಸರುಗಳೆಲ್ಲಾ ಸೇರಿಸಿದೆ. ಯಾರಾದರೂ ಹೆಸರು ಬಿಟ್ಟಿದ್ದರೆ ಹೇಳಿ ಸೇರಿಸಿ ಕೊಳ್ಳಬಹುದು ಎಂದೆಲ್ಲಾ ಸಾರಿದ್ದೇವೆ. ಇಷ್ಟರ ಮೇಲೂ ಅವರು ಮುಂದೆ ಬಾದೆ ಹೋದರೆ ಏನು ಮಾಡೋಣ! ಯಾರಿಗೆ ಅವರ ವೋಟುಗಳನ್ನು ಗಳಿಸಬೇಕೆಂದಿದೆಯೋ ಅವರು ಹೊಗಿ ಅವರಲ್ಲಿ ಆಸಕ್ತಿಯನ್ನುಂಟು ಮಾಡುವುದಕ್ಕೆ ಪ್ರಯತ್ನ ಮಾಡಲಿ. You must educate the people. If Hon'ble Members really want their support they must go to the people and tell them that they should get themselves enrolled if their names are not already in the list.

ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).— ತಾವಿಲ್ಲಿ ಹೇಳುತ್ತಿರುವುದೆಲ್ಲಾ ಕಾಗದದ ಮೇಲಿದೆಯೇ ಹೊರತು ಗ್ರಾಮಾಂತರಗಳಲ್ಲಿ ಎಲ್ಲಿಯೂ ನಡೆಯುತ್ತಿಲ್ಲ!!

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.— ಗ್ರಾಮಾಂತರಗಳಲ್ಲೆಲ್ಲಾ ಟಾಂ ಟಾಂ ಮಾಡಿಸಿದ್ದೇವೆ.

ಶ್ರೀ ಎಂ. ಎ. ಕೃಷ್ಣಪ್ಪನವರು.—ಅವರೇ ಪಟೇಲರು; ಅವರೇ ಈ ಕೆಲಸಗಳನ್ನೆಲ್ಲಾ ನಿಂತು ಸರಿಯಾಗಿ ಮಾಡಿಸಬೇಕು.

Janab SYED ABDUR RAHMAN.— All these difficulties are there because adult franchise is coming to this country for the first time. For the first time give them some facilities that you can possibly give.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—"Possibly give" ಎನ್ನುವ ವಿಷಯವನ್ನೇ ನಾನೀಗ ಹೇಳುತ್ತಿದ್ದೇನೆ. ಎಲ್ಲಾ ಕಡೆಯಲ್ಲೂ ಟಾಂ ಟಾಂ ಮಾಡುತ್ತೇವೆ. ಜನರೆಲ್ಲರೂ ಸಹಕರಿಸಬೇಕೆಂದು ಕೇಳಿ ಕೊಳ್ಳುತ್ತೇವೆ. ಕೈರಾದ ಮಟ್ಟಗೂ ಎಲ್ಲರ ಹೆಸರನ್ನೂ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ರೆವೆನ್ಯೂ ಆಫೀಸರಿಗೆ ಬೇಕಾದರೂ ಬರೆದುಕೊಳ್ಳಬಹುದು; ರಿಜಿಸ್ಟ್ರೇಷನ್ ಆಫೀಸರಿಗೆ ಬೇಕಾದರೂ ಬರೆದುಕೊಳ್ಳಬಹುದೆಂದು ಹೇಳಿದ್ದೇವೆ. ಅವರ ಹೆಸರು, ವಿಳಾಸ, ವಯಸ್ಸು ಇವುಗಳನ್ನು ಕಳುಹಿಸಿಕೊಡುವುದರಲ್ಲೂ ಕೇವಲ ಪೋಸ್ಟ್ ಮೂಲಕ ಕಳುಹಿಸಿಕೊಟ್ಟರೂ ಆಗುತ್ತದೆಂದು ಹೇಳಿದ್ದೇವೆ.

Janab SYED ABDUR RAHMAN.— The Hon'ble Law Minister in charge of this may kindly pay a visit to all these places and make sure whether their instructions are being carried to the last word.

The Hon'ble Sri K. T. BHASHYAM.— The Hon'ble Member's advice is a counsel of perfection and not practical. There are 16 thousand villages and we have hardly 15 days. We cannot go round every village. But we are asking every Sub-Division Officer and Amildar to make report of the *tom tom* made in every village under his jurisdiction. It is for the Hon'ble Members and the general public to educate the people to get their names in the voters' list. It is in that way we can develop the public mind. I am told the response is fairly good. Nevertheless we are not satisfied with it. We would like to see that the last voter is included in the voters' list. We shall do our very best and we will try to give every facility towards that end. The Electoral Registration Officer can, without any form, make any recommendation in cases of obvious printing and clerical mistakes such as wrong information about fathers' or husbands' names, address, spelling mistakes, etc. It is sufficient if they are brought to the notice of the Electoral Registration Officer and it is not necessary to prefer an objection in the printed form.

ಅಧ್ಯಕ್ಷರು.—ಕೆಲವು ವೇಳೆ 'ಇನ್ವಿಯರ್ಲೇ' ಬಿಟ್ಟು ಹೋಗಬಹುದು; ಆಗ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ 'ಇನ್ವಿಯರ್ಸ್' ಅಥವಾ 'ಸ್ಪೆಲ್ಲಿಂಗ್' ತಪ್ಪಾದರೆ ಅದನ್ನೆಲ್ಲಾ ರಿಜಿಸ್ಟ್ರೇಷನ್ ಆಫೀಸರೇ ಸರಿಪಡಿಸಬಹುದೆಂದಿದೆ. ಈ ರೀತಿಯೆಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟ ಮೇಲೂ ಇನ್ನೂ ಏನಾದರೂ ತಾಪು ಸೂಚನೆಗಳನ್ನು ಕೊಟ್ಟರೆ ಲಭುಗಳನ್ನೂ ಕೈರಾದಮಟ್ಟಗೂ ನಡೆಸಿ ಕೊಡುತ್ತೇನೆಂದು ಭರವಸೆ ಕೊಡುತ್ತೇನೆ.

After all, our object and the Hon'ble Members' object is the same, namely, that as many voters should be included in the voters' list as are eligible.

Sri H. B. GUNDAPPA GOWDA.— Delimitation Board?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಮೇಲೆ ಡಿಲಿಮಿಟೇಷನ್ ವಿಚಾರದಲ್ಲಿ ಒಂದು ಸಮಿತಿ ನೇಮಕವಾಗಿತ್ತು. ಅವರಾಗಲೆ ರಿಪೋರ್ಟ್ ಕಳುಹಿಸಿದ್ದಾರೆ.

(ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.)

ಅದರ ಮೇರೆ ನೂಕ್ಕ ಸಲಹೆಗಳನ್ನು ಮಾಡಿ ನಾವು ಕಳುಹಿಸಿಕೊಟ್ಟಿದ್ದೇವೆ. ಇದೇ ಸಂದರ್ಭದಲ್ಲಿ ಇಂಡಿಯಾ ಪಾರ್ಲಮೆಂಟಿನವರು ಡಿಲಿಮಿಟೇಷ್ಣ್ ಅಡ್ವೈಜರಿ ಸಮಿತಿಯೊಂದನ್ನು ಏರ್ಪಾಡುಮಾಡಿದ್ದರು. ಅವರೂ ಈಗಾಗಲೇ ಒಂದು ವರದಿಯನ್ನು ತಯಾರಿಸಿ ಸೀದಾ ಎರೆಕ್ಟ್ ಕಮಿಷನರವರಿಗೆ ಕಳುಹಿಸಿಕೊಟ್ಟಿದ್ದಾರೆಂದು ಗೊತ್ತಾಗಿದೆ. ಆ ವರದಿಯ ವಿಷಯು ನಮಗೆ ಸಂಬಂಧ ಪಟ್ಟದ್ದಲ್ಲ. That is a matter between them and the Election Commissioner.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಪೋಟರು ಗಳ ಪಟ್ಟಿಯನ್ನು ತಿದ್ದುಪಾಟು ಮಾಡುವುದಕ್ಕೆ ಕೊಟ್ಟಿರುವ ಕಾಲಾವಕಾಶ ಮುಗಿಯುವುದರೊಳಗೇನಾದರೂ ಈ ವರದಿ ನಮಗೆ ಬರುವುದು ಸಾಧ್ಯವೋ?

The Hon'ble Sri K. T. BHASHYAM.—No. The Commissioner will make the necessary recommendation in the light of our recommendation and those of the Parliamentary Advisory Committee to the President. The President will frame a Bill on that and the Bill will have to be brought before the Parliament. It may not be possible for us to get the delimitation finalised before the time expires for the enrolment of the voters.

Sri L. SIDDAPPA.—Regarding the Revising Authority it is very necessary that he tours. As he happens to be the subordinate of the High Court, it is necessary to move the High Court to permit the Officer to tour.

The Hon'ble Sri K. T. BHASHYAM... If any such occasion arises, we will do so.

Sri L. SIDDAPPA.—With the assurance given by the Hon'ble the Law Minister I withdraw my cut motion.

The cut motion was then, by leave of the House, withdrawn.

Mr. CHAIRMAN.—Sri B. Hutche Gowda may move his cut motion.

Need for and Functions of the Commissioner on Special Duty.

Sri B. HUTCHE GOWDA (Tumkur District-General).—Sir, I beg to move.—

"That the demand under the head '12. General Administration' for Rs. 8,17,400 be reduced by Re.1 (to ascertain the need and the functions of the Commissioner on Special Duty who is appointed in July 1950.)"

ಸ್ವಾಮಿ, ಈ ಬೇಡಿಕೆ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತ ಮುಂದೆರಡು ವಿಷಯುಗಳನ್ನು ನಾನು ತಿಳಿಸಬೇಕೆಂದಿದ್ದೇನೆ. ಡಿಮ್ಯಾಂಡ್ ನಂ. 7 ರಲ್ಲಿ 12. General Administration.—1-A, Reception and Entertainment of Guests ಎಂದೂ, ನಂ. 4 ರಲ್ಲಿ Civil Secretariats ಎಂದು ಮಾತ್ರ ಕಳುಹಿಸಲಾಗಿದೆ. ಅಂದ ಮೇರೆ ಇದರಲ್ಲಿ ಬರಿ ಸೆಕ್ರೆಟೇರಿಯೇಟ್ ಎಂದು ಹೇಳಿದೆಯೇ ಹೊರತು ಇದರಲ್ಲಿ ಕಮಿಷನರ್ ಎಂಬ ಪದವನ್ನೇ ಪ್ರೇರಿಸಿಲ್ಲ. ಆದಾಗ್ಯೂ ಈ ಬಗ್ಗೆ ಒಬ್ಬ ಕಮಿಷನರನ್ನು ಈಗ ನೇಮಕ ಮಾಡಿದ್ದಾರೆ. ಈ ಹುದ್ದೆಯು ಅಷ್ಟು ಅವಶ್ಯಕವಾಗಿದ್ದ ಪಕ್ಷಕ್ಕೆ ಇದನ್ನು ಇವರು ಸಕಾಲದಲ್ಲೇ ಏತಕ್ಕೆ ಆರೋಚನೆ ಮಾಡಲಿಲ್ಲ? ಈಗೆ ಇವರು ಒಬ್ಬ ಅಧಿಕಾರಿಗಳನ್ನು ದೆಹಲಿಯಲ್ಲಿ 365 ದಿವಸವೂ ಇಡತಕ್ಕ ಪ್ರಮೇಯವಾದರೂ ಏನಿದೆಯೋ ನನಗೆ ಗೊತ್ತಾಗುವುದಿಲ್ಲ. ಅಲ್ಲಿ ಇವರಿಗೆ ಆ 365 ದಿವಸವೂ ಏನು ಕೆಲಸ ಏರುತ್ತೆ?

The Hon'ble Sri K. CHENGALARAYA REDDY.—There is no permanent officer. 365 ದಿವಸವೂ ಅವರು ಅಲ್ಲೇ ಇರುವುದಿಲ್ಲ. ಅಲ್ಲಿಯೂ ಇರುತ್ತಾರೆ, ಇಲ್ಲಿಗೂ ಬರುತ್ತಾರೆ.

Sri B. HUTCHE GOWDA.—He is paid for the special work.

Sri L. SIDDAPPA.—He is a roving Ambassador!

The Hon'ble Sri K. CHENGALARAYA REDDY.—Not Ambassador.

ಶ್ರೀ ಬಿ. ಹುಚ್ಚೇಗೌಡರು.—ಪ್ರತಿ ತಿಂಗಳಲ್ಲಿಯೂ ಒಬ್ಬ ಸಚಿವರಲ್ಲದಿದ್ದರೆ ಮತ್ತೊಬ್ಬ ಸಚಿವರು, ಆ ಸಚಿವರ ಜೊತೆಗೆ ಅವರ ಕಾರ್ಯದರ್ಶಿಗಳು, ಮತ್ತು ಇರಾಖಾ ಮೊಖ್ತೇಸರರುಗಳೂ ದೆಹಲಿಗೆ ಹೋಗೇ ಹೋಗುತ್ತಿದ್ದಾರೆ. ಈಗಿದ್ದರೂ ದೆಹಲಿಯಲ್ಲೇ ಒಬ್ಬ ಅಧಿಕಾರಿಗಳನ್ನು ಈಗೆ ಪ್ರತ್ಯೇಕವಾಗಿಡತಕ್ಕ ಅವಶ್ಯಕತೆಯಾದರೂ ಏನಿತ್ತು? ಎಕಾನಮಿ ಆಫೀಸರ ವರದಿಯಲ್ಲಿ ಆರು ಜನ ಸೆಕ್ರೆಟೆರಿಗಳಾದರೆ ಸಾಕೆಂದು ಅವರು ಶಿಫಾರಸ್ಸು ಮಾಡಿದ್ದಾಗ್ಯೂ ಈಗ ತಾವು 10 ಜನ ಸೆಕ್ರೆಟರಿಗಳನ್ನು ನೇಮಕ ಮಾಡಿಕೊಂಡಿರುತ್ತೀರಿ. ಇದರ ಜೊತೆಗೆ ಈಗ ಮತ್ತೊಬ್ಬ ಅಡಿಷನರ್ ಸೆಕ್ರೆಟರಿಗಳು ಬೇರೆ ಇರುತ್ತಾರೆ.

The Hon'ble Sri K. CHENGALARAYA REDDY.—There was. Now there is no Additional Secretary.

Rajamantrapravina H. B. GUNDAPPA GOWDA (Hassan District-General).—What is the designation now?

The Hon'ble Sri K. CHENGALARAYA REDDY.—Secretary to Government, Medical and Public Health.

Sri B. HUTCHE GOWDA.—How is it that his pay is not mentioned?

ಶ್ರೀ ಎರ್ ಸಿದ್ದಪ್ಪನವರು.—ಮೂರು ವರ್ಷಗಳಾಗಿ ಹೋದರೂ ಆ 'ಲೆಗೆಸಿ' ಎಂಬುದು ಇನ್ನೂ ಹೋಗಲಿಲ್ಲವೇ!

ಶ್ರೀ ಬಿ. ಹುಚ್ಚೇಗೌಡರು.—ಎಕನಾಮಿ ಆಫೀಸರು ಈ ಸೆಕ್ರೆಟರಿಗಳ ಸಂಖ್ಯೆಯನ್ನು ಹಿಂದು ಕಡೆ ತಗ್ಗಿಸ ಬೇಕೆಂದು ಸಲಹೆ ನೀಡುತ್ತಿರುವಾಗ, ತಾವು ಈ ಅಧಿಕಾರಿಗಳ ಸಂಖ್ಯೆಯನ್ನು ಮತ್ತೊಂದು ಕಡೆ ನಿರಾತಂಕವಾಗಿ ಹೆಚ್ಚು ಮಾಡುತ್ತ ಹೋಗುತ್ತಿದ್ದೀರಿ. ಈಗೆ

ಹೆಚ್ಚು ಮಾಡತಕ್ಕ ಆವಶ್ಯಕತೆ ಏನಿದೆಯೋ ಗೊತ್ತಿಲ್ಲ. ಆವಶ್ಯಕತೆ ಇರಲಿ, ಇಲ್ಲದೇ ಇರಲಿ, ಯಾರಿಗಾದರೂ ಒಂದು ನೌಕರಿ ಬೇಕಾಗಿದ್ದರೆ, ಆ ಕೂಡಲೆ, ಹೀಗೆಂದು ಸ್ಥಾನವನ್ನು ಕಲ್ಪಿಸಿಕೊಂಡು ಬಿಡುತ್ತೀರಿ. ಆದರೆ ತಮ್ಮ ವಾದ ಒಂದು ವೇಳೆ ಹೀಗೂ ಬರಬಹುದು: ಈಗ ಸರ್ವೆ ಅಂಡ್ ಸೆಟಲ್‌ಮೆಂಟಿನ ಅಧಿಕಾರಿಗಳು ಒಂದು ಸಲ 'ಸರ್ವೆ ಅಂಡ್ ಸೆಟಲ್‌ಮೆಂಟ್ ಕಮಿಷನರೆಂದೂ' ಮತ್ತೊಂದು ಸಂದರ್ಭದಲ್ಲಿ 'ಸರ್ವೆ ಅಂಡ್ ಸೆಟಲ್‌ಮೆಂಟ್ ಸೂಪರಿಂಟೆಂಡೆಂಟರೆಂದೂ' ಹೇಳಿತ್ತಿರುವ ಪ್ರಕಾರ, ಈಗ ತಾವು ತಿಳಿಸಿರುವ ನಕ್ಕೆಟರಿಗಳು ಕೆಲವು ವೇಳೆ ಕಮಿಷನರೂ, ಮತ್ತೆ ಕೆಲವು ವೇಳೆ ನಕ್ಕೆಟರಿಗಳೂ ಆಗುತ್ತಾರೆ ಎಂಬುದಾಗಿ. ಹೀಗೆ ಯಾವ ಬಾಬತ್ತಿಲ್ಲೇ ನೋಡಲು, ತಾವು ಒಂದನ್ನೂ ನಕಾರಾದಲ್ಲಿ ಮಾತಾಡುತ್ತಿಲ್ಲ. ಈ ದಿವಸ ಒಂದು ಇರಾಖೆಯನ್ನು ಸ್ಥಾಪಿಸಿದರೆ ಸಾಕೆಂದು ಹೇಳಿ ಮತ್ತೆ ನಾಳೆ ದಿವಸ ಬೇರೊಂದು ಇರಾಖೆಯನ್ನು ಸ್ಥಾಪಿಸುತ್ತಿದ್ದೀರಿ. ಹೀಗೆಲ್ಲ ತಾವು ಮಾಡುತ್ತಿರುವುದನ್ನು ನೋಡಿದರೆ ನಮಗೊಂದು ಪರಪಾಟಲನ್ನುಂಟುಮಾಡಲು ತಮ್ಮ ಉದ್ದೇಶವಿದ್ದಂತೆ ಕಾಣುತ್ತದೆ. ಈಗ ದೆಹಲಿಯಲ್ಲಿರತಕ್ಕ ಆಫೀಸರಿಗೆ ಅಂಥ ಕೆಲಸವೇನೂ ಇರುವುದಿಲ್ಲ. ಆದರೆ ಒಂದು ಗಾದೆ ಹೇಳುತ್ತಾರೆ. 'ಉದ್ಯೋಗವಿಲ್ಲದ ಬಡಗಿ, ಏನೋ ಮಾಡಿದ' ಎಂದು.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಏನು ಮಾಡಿದ?

ಶ್ರೀ ಬಿ. ಹುಚ್ಚೇಗೌಡರು.—'ಏನುಮಾಡಿದ' ಎಂದರೆ ಮನೆಗೆ ನಿಲ್ಲಿಸಿದ್ದ ಕಂಬಗಳನ್ನು ಕೆತ್ತಿದ. ಇದು ಕೂಡಹಾಗೆ ಆಯಿತು. ತಾವು ಯಾವುದೊಂದು ಕೆಲಸವನ್ನೇ ಆಗಲಿ ಏತವ್ಯಯ ದೃಷ್ಟಿಯಿಂದರಾಗಲೀ, ಅಥವಾ ಕೆಲಸ ಬೇಗಬೇಗ ಮುಂದುವರಿಯಬೇಕೆಂಬ ದೃಷ್ಟಿಯಿಂದರಾಗಲೀ ಮಾಡುತ್ತಿಲ್ಲ. ಕೆಲವರಿಗೆ ನೌಕರಿ ಕಲ್ಪಿಸಿಕೊಡಬೇಕೆಂಬ ಒಂದೇ ಒಂದು ಉದ್ದೇಶದಿಂದ ತಾವು ಹೀಗೆಲ್ಲಾ ಮಾಡುತಿದ್ದೀರಿ. ಹೀಗೆ ಮಾಡುವುದರ ಜೊತೆಗೆ ಯಾರಿಗಾದರೂ ಒಂದು ನೌಕರಿ ಬೇಕಾಗಿದ್ದರೆ, ಕೆಲಸದಲ್ಲಿರತಕ್ಕೆ ಮತ್ತೊಬ್ಬರಿಗೆ ನಿರ್ನಿಮಿತ್ಯವಾಗಿ ರಜಾಕೊಟ್ಟು ಬಿಡುತ್ತೀರಿ. ಈ ಅಂಶಗಳನ್ನೆಲ್ಲಾ ತಾವು ಮೊದಲೇ ಊಹೆಮಾಡಿ ಹೀಗೆಲ್ಲಾ ಚರ್ಚೆಗೆ ಅವಕಾಶವಾಗುತ್ತದೆಂಬುದನ್ನು ತಿಳಿದೇ ಈ ಅಂಶವನ್ನು ತಾವು ಬಡ್ಜೆಟ್ಟಿನಲ್ಲಿ ಅಗ್ಗೆ ಅಡಕಮಾಡಲಿಲ್ಲವೆಂದು ಹೊಳೆಯುತ್ತಿದೆ. ಈಗಾಗಲೇ ತಾವು ಕಲ್ಪಿಸಿರುವಂಥ ಹುದ್ದೆಯು ಪ್ರಾರಂಭವಾಗಿ ನಾಲ್ಕಾರು ತಿಂಗಳಾಗಿದೆ. ಹೀಗೆ ತಾವು ಮಾಡಿರತಕ್ಕದ್ದು ಸರಿಯಾದ ರೀತಿ ನೀತಿಯಲ್ಲವೆಂಬುದನ್ನು ಸೂಚಿಸತಕ್ಕ ಬಗ್ಗೆ ನಾನು ಈ ಕತ್ತರಿ ನಿರ್ಣಯವನ್ನು ಈಗ ಸಭೆಯ ಮುಂದೆ ತಂದಿದ್ದೇನೆ. ಇದಕ್ಕೆ ಸರ್ವರೂ ಬೆಂಬಲ ನೀಡಬೇಕೆಂದು ಕೇಳಿಕೊಂಡು ಇದನ್ನು ಸಭೆಯ ಮುಂದಿಡುತ್ತೇನೆ

Mr. CHAIRMAN:—Cut motion moved:

"That the demand under the head '12 General Administration' be reduced by Re. 1."

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).— ಈ ಮೋತಾ ನಿರ್ಣಯದ ಸಂಬಂಧವಾಗಿ ಒಂದೆರಡು ವಿಷಯುಗಳನ್ನು ನಾನು ಸಭೆಯ ಗಮನಕ್ಕೆ ತರಬೇಕಾಗಿದೆ. ನಾವು ಯಾವುದಾದರೂ ಒಂದು ವಿಚಾರವನ್ನು ಸರ್ಕಾರದವರ ಮುಂದೆ ತಂದರೆ ಅವರು ನಮಗೆ ಪದೇ ಪದೇ ಸರ್ಕಾರದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ ಎಂದು ಉತ್ತರ ಹೇಳಿಬಿಡುತ್ತಿದ್ದಾರೆ. ಹಾಗೆ ಸರ್ಕಾರದ ಹಣಕಾಸಿನ ಬಿಕ್ಕಟ್ಟು ಬಹಳ ಒತ್ತಡಕ್ಕೆ ಬಂದಿರುವ ಕಾರಣ ನಾವುಗಳು ಈಗ ಅಡಿಕ ಪ್ರಮಾಣದಲ್ಲಿ ರಕ್ಕ ಹುದ್ದೆಗಳನ್ನು ಕಮ್ಮಿ ಮಾಡಲೇಬೇಕೆಂದು ಒತ್ತಾಯಪಡಿಸುತ್ತಿದ್ದರೂ, ಸರ್ಕಾರದವರು ಏನೋ ಒಂದು ನೆಪದ ಮೇಲೆ ಹೀಗೆ ದಿವಸ ದಿವಸಕ್ಕೂ ಹೊಸ ಹೊಸ ಹುದ್ದೆಗಳನ್ನು ಕಲ್ಪಿಸುತ್ತಿರುವುದು ಸರಿಯಾದುದಲ್ಲವೆಂದು ಹೇಳಿ, ಸರ್ಕಾರದವರ ನೀತಿಯನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಹೀಗೆಲ್ಲಾ ನಡೆಯುತ್ತಿರುವುದನ್ನು ತಡೆಗಟ್ಟಬೇಕೆಂಬ ಉದ್ದೇಶದಿಂದಲೇ ಈಗ ಈ ಕತ್ತರಿ ನಿರ್ಣಯವು ಸಭೆಯ ಮುಂದೆ ಬಂದಿದೆ. ದೆಹಲಿಯಲ್ಲಿರಕ್ಕ ಅಧಿಕಾರಿಗಳಿಗೆ ಅಲ್ಲಿ ಬಹಳ ಕೆಲಸವಿದೆ. ಆದುದರಿಂದ ನಮ್ಮ ಪರವಾಗಿ ಇಲ್ಲಿಂದ ಹೊರಡತಕ್ಕ ಫೈಲುಗಳನ್ನು ಹೆಂಬಾಲಿಸಿಕೊಂಡು, ಅಲ್ಲಿಗೆ ಹೋಗಿ ಇವುಗಳ ಬಗ್ಗೆ ಜಾಗ್ರತೆ ಕಾರ್ಯಕ್ರಮ ಕೈಗೊಳ್ಳುವಂತೆ ಮಾಡಬೇಕಾಗಿರುವ ಪ್ರಯುಕ್ತ ಹೀಗೊಂದು ಹುದ್ದೆಯನ್ನು ಕಲ್ಪಿಸಬೇಕಾಗಿ ಬಂದಿತೆಂದು ತಾವು ಹೇಳಬಹುದು. ಆದರೆ ಈ ಸಂದರ್ಭದಲ್ಲಿ ಒಂದು ವಿಚಾರ ತಿಳಿಸಬೇಕಾಗಿದೆ. ಒಂದು ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಮಂತ್ರಿಗಳು ಸಂಸ್ಥಾನದ ಹೊರಗಡೆ ಹೋಗಿಬರಲು ಏನು ಖರ್ಚಾಗುತ್ತದೆಯೆಂದು ಒಂದು ಪ್ರಶ್ನೆ ಹಾಕಿದ್ದಕಾಲದಲ್ಲಿ, ಅವರಿಗೆ ಸಂಚಾರದ ಬಗ್ಗೆ (ಟಿ.ಎ.) 49 ಸಾವಿರ ರೂಪಾಯಿಗಳು ಖರ್ಚಾಗಿರುತ್ತದೆಂದು ಉತ್ತರ ಕೊಟ್ಟಿದ್ದಾರೆ ಹೀಗೆ ಒಬ್ಬ ಸಚಿವರಲ್ಲದಿದ್ದರೆ, ಮತ್ತೊಬ್ಬ ಸಚಿವರು ದೆಹಲಿಗೆ ಹೋಗಿ ಬರುತ್ತಲೇ ಇದ್ದಾರೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಹಾಗೆ ಹೋಗಿ ಬರಲೇಬೇಕು, ಇಲ್ಲದಿದ್ದರೆ ಬಹಳ ಕಷ್ಟಕ್ಕೆ ಬರುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಹಿಂದಿನಂತೆ ಈಗೇನು ಪೋಸ್ಟ್ ಸರ್ವಾಕ್ಕೆ ತೊಂದರೆ ಇಲ್ಲ. ಈ ದಿವಸ ನಾವು ಇಲ್ಲಿಂದ ಪೋಸ್ಟ್‌ಮಾಡತಕ್ಕ ಕಾಗದ ಪತ್ರಗಳು air mail ಮೂಲಕ ನಾಳೆ ದೆಹಲಿಗೆ ಸುರಕ್ಷಿತವಾಗಿ ಹೋಗಿ ತಲುಪೇ ತಲುಪುತ್ತವೆ. ಇಂಥಾ ಹಣಕಾಸಿನ ಕಷ್ಟದ ಪರಿಸ್ಥಿತಿಯಲ್ಲಿ, ಹೀಗೊಬ್ಬ ಅಧಿಕಾರಿಯನ್ನು ನೇಮಿಸತಕ್ಕ ಆವಶ್ಯಕತೆಯಾದರೂ ತಮಗೆ ಏನಿತ್ತು?

The Hon'ble Sri K. CHENGALA RAYA REDDY.— The motion is to ascertain the need for such an officer..." We will give the information

Sri L. SIDDAPPA.—The words are: "to ascertain the need and the functions of the Commissioner on Special Duty who was appointed in July." ಎರಡೂ ಉಂಟು. Need and functions.

The Hon'ble Sri K. CHENGALA RAYA REDDY.—We will give the information. We will explain it.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು.—ಈ ಸಂಬಂಧವಾಗಿ ತಾವು ಮೊದಲೇ ಕೊಂಚ ವಿಚಾರಗಳನ್ನು ತಿಳಿಸಿದ್ದರೆ ಚೆನ್ನಾಗಿತ್ತು. ನಾನೂ ಕೂಡ ಒಂದೆರಡು ಮಾತನಾಡಬೇಕೆಂದಿದ್ದೆ.

ಮಾನ್ಯ ಶ್ರೀ ಎಚ್ ಸಿ. ದಾನಪ್ಪನವರು (ಆರ್ಥಿಕ ಸಚಿವರು).—ಯಾರು ಬೇಡವೆಂದರು?

Sri L. SIDDAPPA.—It is stated in the Explanatory Note.

"The appointment of the Commissioner and his staff were sanctioned only in July 1950 and the present sanction is for a period of six months and no provision was made in the Budget."

ಈ ವಾಯಿದೆ ಕಳೆದ ಮೇಲಾದರೂ ತಾವು ಇದನ್ನು ತೆಗೆದು ಹಾಕಬಹುದು.

The Hon'ble Sri K. CHENGALARAYA REDDY.—It has now been extended till the end of March. It is a new scheme. So we wanted to bring it.

ಶ್ರೀ ಎಲ್. ಸಿದ್ದಪ್ಪನವರು.—ನನಗೆ ತಿಳಿದ ಮಟ್ಟಿಗೆ ಈ ಅನುಕೂಲತೆಗಳೆಲ್ಲಾ ಇರುವಾಗ ಮತ್ತು ಒಬ್ಬ ಕಮಿಷನರು ಪ್ರತ್ಯೇಕವಾಗಿ ನೇಮಕವಾಗಿರುವಾಗ ಮಾನ್ಯ ಮಂತ್ರಿಗಳು ಮತ್ತು ಇತರ ದೊಡ್ಡ ದೊಡ್ಡ ಅಧಿಕಾರಿಗಳು ಪದೇ ಪದೇ ಹೋಗುವುದಕ್ಕೆ ಅವಶ್ಯಕತೆ ಏನಿದೆ? ಇಂಟರ್‌ನ್ಯಾಷನಲ್ ಕಾನ್‌ಫರೆನ್ಸ್‌ಗಳು ಎಷ್ಟೋ ಆಗುತ್ತವೆ. ಅಲ್ಲಿಗೆ ಮುಖ್ಯಾಧಿಕಾರಿಗಳು ಹೋಗುವಾಗ ಇರುವ ಬಾಕಿ ಕೆಲಸಗಳನ್ನೂ ನೋಡಿಕೊಂಡು ಬನ್ನಿ ಎಂದು ಅವರಿಗೇ ಹೇಳಬಹುದು. ಆ ರೀತಿ ಮಾಡಿ ಹಣದ ಖರ್ಚನ್ನು ಕಡಿಮೆ ಮಾಡುವುದನ್ನು ಬಿಟ್ಟು ಈಗಿನ ಸಂದರ್ಭದಲ್ಲಿ ಸಿಬ್ಬಂದಿಯನ್ನು ಹೆಚ್ಚಾಗಿ ಕಡಿಮೆ ಮಾಡುವುದು ಸೂಕ್ತವಲ್ಲ. ಅದನ್ನು ನಿಲ್ಲಿಸಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ತಾವು ಒಬ್ಬ ಆಫೀಸರನ್ನು ನೇಮಕಮಾಡಿದ್ದೀರಿ. ಆದ್ದರಿಂದ ಇದಕ್ಕೆ ಅಗತ್ಯವಿದೆಯೆಂದು ದೃಢಪಡಿಸಬೇಕಾಗಿದೆ. ಅವರ ಹುದ್ದೆಯ ಹೆಸರು ಮತ್ತು ಪಾಯಂ ಆಗಿ ಇರತಕ್ಕ ಜಾಗ ಸರಿಯಾಗಿ ಗೊತ್ತಾಗಿಲ್ಲ. ಅವರು ಡೆಲ್ಲಿಯಲ್ಲಿ ಎಷ್ಟು ದಿವಸ ಇರುತ್ತಾರೆ ಮತ್ತು ಬೆಂಗಳೂರಿನಲ್ಲಿ ಎಷ್ಟು ದಿನ ಇರುವರು ಎಂಬುದು ತಿಳಿಯದು. ಈಗ ನಮ್ಮಲ್ಲಿ ಹಣವಿಲ್ಲ. ಆದರೆ ಆಫೀಸರುಗಳನ್ನು ದೆಹಲಿಗೆ ಆಗಾಗ್ಗೆ ಕಳುಹಿಸುತ್ತಿದ್ದೀರಿ. It all depends upon what sort of officers you get. ಈಗ ಕಮಿಷನರ ವಿಚಾರ ಮಾತ್ರ ಹೇಳುತ್ತಿಲ್ಲ. ತಾವು ಹೈಲೆವಲ್ ಟಾಕ್ಸ್‌ನಲ್ಲಿರುವಾಗ ಮತ್ತು ದೊಡ್ಡ ತೀರ್ಮಾನಕ್ಕೆ ಬರುವಾಗ ಎಷ್ಟೋ ಇಂಟರ್‌ಮೀಡಿಯರಿ ಆಫೀಸರುಗಳು ಇಲ್ಲಿಂದ ಹೊರಕ್ಕೆ ಹೋಗಿ ಬರುತ್ತಿರುತ್ತಾರೆ. ಆದರೆ ಅವರು ಏನು ಕೆಲಸ ಮಾಡಿಕೊಂಡು ಬರುತ್ತಿದ್ದಾರೆ, ಅದಕ್ಕೆ ತಕ್ಕ ಅವಶ್ಯಕತೆಯಿದೆಯೆ, ಅದರಲ್ಲಿ ಕೊಂಚಭಾಗವಾದರೂ ಕಡಿಮೆ ಮಾಡಲು ಸಾಧ್ಯವಿಲ್ಲವೇ ಎಂಬ ಸಲಹೆಯನ್ನು ನಮಗೆ ಬೇಕಾಗಿದೆ. ಆದನ್ನು ತಿಳಿಸಲು ಏನೂ ಕಷ್ಟವಿಲ್ಲ.

ಇನ್ನೊಂದು ವಿಚಾರ. ಈಗ ಇತರ ಸರ್ಕಾರಗಳೂ ಕೂಡ ಹೀಗೆ ಅವರ ಆಫೀಸರುಗಳನ್ನು ಡೆಲ್ಲಿಯಲ್ಲಿಟ್ಟಿವೆಯೆ? ಅವರಿಗೆ ಮನೆ ಬಾಡಿಗೆ ವಗೈರೆ ಕೊಡಲಾಗುತ್ತಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮನೆ ಬಾಡಿಗೆ ಕೊಡುತ್ತಿಲ್ಲ. I will make a statement. If the Hon'ble Members feel like saying anything even after hearing my statement, they may do so. But, most of the doubts, I am sure, will be dispelled after I make a statement.

Sri L. SIDDAPPA.—We are very reasonable beings.

The Hon'ble Sri K. CHENGALARAYA REDDY.—I am happy that all reasonable beings will be satisfied by what I am going to say. But there is what is known as opposition for the sake of opposition.

Janab J. MOHAMED IMAM.—I object to that remark, Sir.

The Hon'ble Sri K. CHENGALARAYA REDDY.—I was referring to Sri Siddappa and Sri Gundappa Gowda.

Sri H. B. GUNDAPPA GOWDA.—I emphatically protest against that statement.

The Hon'ble Sri T. MARIAPPA (Home Minister).—There could be no objection for opposing for the sake of opposition. The Hon'ble Member is at perfect liberty to do so.

The Hon'ble Sri K. CHENGALARAYA REDDY.—My Hon'ble friend knows that there is a recognised parliamentary tradition, known as opposition for the sake of opposition. There is nothing wrong in it.

Janab J. MOHAMED IMAM.—But why should it be said with reference to us that we are opposing for the sake of opposition?

The Hon'ble Sri K. CHENGALARAYA REDDY—I will allow the Hon'ble Members some satisfaction, and I will not dispute that statement now.

ಸ್ಪೆಷಲ್ ಡ್ಯೂಟಿ ಕಮಿಷನರ ಹೊಸ ಹುದ್ದೆಯನ್ನು ಸೃಷ್ಟಿ ಮಾಡಿ ಅನಾವಶ್ಯಕವಾಗಿ ಸರ್ಕಾರದವರು ಹಣ ಖರ್ಚುಮಾಡುತ್ತಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶ್ರೀ ಹುಚ್ಚೇಗೌಡರು ಯಾರೋ ಕೆಲವರಿಗೆ ಜಾಗಗಳನ್ನು ಕೊಡುವುದಕ್ಕಾಗಿ ಏನೋ ಒಂದು ಅನುಕೂಲವಾದ ನೀತಿ ಅನುಸರಿಸಿ ಈ ಉದ್ಯೋಗ ಕಲ್ಪಿಸಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ. ಈ ಒಂದು ಅಧಿಕಾರಿಗಾಗಿ ಏನೋ ವಿಪರೀತ ಹಣ ಖರ್ಚಾಗುತ್ತಿದೆ ಎಂಬ ಆಪಾದನೆ ಬಂದಿದೆ. ಆದರೆ ಹಾಗೆ ಆದರೆ ಇದರಿಂದ ಉಳಿತಾಯವಾಗುತ್ತಿದೆ ಎಂದು ನಮಗೆ ತೋರಿಸಿ ಮಾಡುತ್ತೇನೆ. ಉಳಿತಾಯ ಮಾಡಬೇಕೆಂಬ ಉದ್ದೇಶವಿದೆ ಎಂದು ಹೇಳಬೇಕಾಗಿದೆ. ಪರಿಸ್ಥಿತಿ 1942 ನೆಯ ಇಸವಿಯಿಂದ ಪೂರ್ಣ ಬದಲಾವಣೆಯಾಗಿದೆಯೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಬರಬರುತ್ತಾ, ಈ ಮೂರು ವರ್ಷಗಳಿಂದ ಪ್ರಾಂತ ಸರ್ಕಾರಗಳಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಸಂಬಂಧ ಹೆಚ್ಚುತ್ತಿದೆ. ಒಂದೊಂದು ಇಲಾಖೆಯಲ್ಲೂ ಸಹ ಅನೇಕ ವಿಷಯಗಳಲ್ಲಿ ಕೇಂದ್ರ ಸರ್ಕಾರಕ್ಕೂ ಮತ್ತು ಪ್ರಾಂತ ಸರ್ಕಾರಗಳಿಗೂ ನಾನಾರೀತಿ ಹಂತಗಳಲ್ಲಿ ವಿಚಾರವಿನಿಮಯವಾಗಿ ಕೊನೆಯ ತೀರ್ಮಾನಕ್ಕೆ ಬರಬೇಕಾಗಿದೆ. ಉದಾಹರಣೆಗೆ ಎಲ್ಲವನ್ನೂ ಕೊಡಬೇಕಾಗಿಲ್ಲ.

ಆಹಾರ ನೀತಿ, ಆಹಾರ ಹಂಚಿಕೆ ಇವೆಲ್ಲಾ ಮುಖ್ಯವಾದುವು. ಇನ್ನೂ ಹಾಗೆಯೇ ಹಣಕಾಸಿನ ಸ್ಥಿತಿ. ಅಷ್ಟೇ ಅಲ್ಲದೆ ಈ ಮೂರು ವರ್ಷಗಳಿಂದ ರಾಜ್ಯಾಂಗಕ್ಕೆ ಸಂಬಂಧಪಟ್ಟ ವಿಷಯಗಳು, ಹೊಸ ರಾಜ್ಯಾಂಗ ಬಂದ ಮೇಲೆ ಲೆಜಿಸ್ಲೇಷನ್‌ಗೆ ಸಂಬಂಧಪಟ್ಟ ವಿಷಯ, ಇಂಟರ್‌ಸ್ಟೇಟ್ ವಿಷಯ, ಅದರಿಂದ ಉದ್ಭವವಾಗುವ ಪ್ರಶ್ನೆಗಳು ಇವು ಬಹಳವಾಗಿ ಜಾಸ್ತಿಯಾಗುತ್ತಿವೆ. ಇದಿಷ್ಟೇ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ವಿತ್ತರು ಮಂತ್ರಿಗಳಾಗಿದ್ದಾಗ ಇಂಥ ಪರಿಸ್ಥಿತಿಯೇನೂ ಒದಗುತ್ತಿರಲಿಲ್ಲ. ಕೇಂದ್ರದ ಪ್ರತಿನಿಧಿಯಾಗಿ ಇಲ್ಲಿ ರೆಸಿಡೆಂಟ್ ಇರುತ್ತಿದ್ದರು. ಅದ್ದರಿಂದ ಅವರಿಗೆ ಇಲ್ಲೇ ಅನೇಕ ವಿಚಾರಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿತ್ತು. ನಮಗೆ ಅವರ ಅನುಭವ ಅಷ್ಟಿಲ್ಲ. ಅದ್ದರಿಂದ ಸ್ವಲ್ಪ ಹೇಳಿದ್ದಾರೆ. ಈಗ ಅನೇಕ ವಿಷಯಗಳು ಇತ್ಯರ್ಥವಾಗಬೇಕಾಗಿವೆಯೆಂಬುದು ನಿರ್ವಿವಾದವಾದ ಮಾತು. ಕೈಗಾರಿಕೆಗಳಿಗೆ ಬೇಕಾಗಿರುವ ವಸ್ತುಗಳಿಗಾಗಿ ಪದೇ ಪದೇ ಇಂಪೋರ್ಟ್ ಲೈಸನ್ಸ್ ತೆಗೆದುಕೊಳ್ಳಬೇಕಾಗಿದೆ. ಅದು 15 ದಿವಸ, ಒಂದು ತಿಂಗಳು ತಡವಾದರೆ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತದೆ. ಹಾಗೆ ಆಗಿರುವ ಉದಾಹರಣೆಗಳಿವೆ. ಚೇಂಬರ್ ಆಫ್ ಕಾಮರ್ಸ್‌ನಿಂದ ಲೈಸನ್ಸ್ ಇತ್ಯಾದಿ ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಕೇಂದ್ರ ಸರ್ಕಾರದೊಂದಿಗೆ ಪತ್ರವ್ಯವಹಾರ ನಡೆದು ತೀರ್ಮಾನವಾಗುವುದು ತಡವಾಗುವುದರಿಂದ ದೇಶಕ್ಕೆ ನಷ್ಟವಾಗುವ ಕಡಮೆಯಾಗುವುದಲ್ಲದೆ ಕೈಗಾರಿಕೆಗೂ ಧಕ್ಕೆ ಬರುತ್ತದೆ ಅದ್ದರಿಂದ ಒಬ್ಬ ಆಫೀಸರನ್ನು ಇಟ್ಟು ಜಾಗ್ರತೆ ಕೆಲಸ ಕಾರ್ಯಗಳು ನಡೆಯಲು ಅನುಕೂಲಪಡಿಸಬೇಕೆಂದು ಪತ್ರ ಬಂದಿದೆ. ನಮ್ಮ ಅನುಭವದಲ್ಲಿ ಹೀಗೆ ಅನೇಕ ವಿಷಯಗಳನ್ನು ತೀರ್ಮಾನ ಮಾಡಬೇಕಾದ ಪ್ರಸಂಗ ಬಂದಿದೆ. ಅನೇಕ ವಿಚಾರಗಳನ್ನು ಸ್ಪೆಷಲ್ ಡ್ಯೂಟಿ ಕಮಿಷನರ ಮೂಲಕ ಇತ್ಯರ್ಥ ಮಾಡಲು ಅನುಕೂಲವಾಗಿದೆ. ಮಿನಿಸ್ಟೀರಿಯಲ್ ಸ್ಟೇಟಸ್‌ನಲ್ಲಿರುವ ಲೈಯಾಸನ್ ಆಫೀಸರನ್ನು ಖಾಯಮಾಗಿ ಮಾಡಬೇಕೆಂದು ಯೋಚನೆ ಮಾಡಿ ನಾವು 1948ರಲ್ಲಿ ಅಧಿಕಾರಕ್ಕೆ ಬಂದಾಗ ಪ್ರಸ್ತಾಪ ಮಾಡಿದೆವು. ಅದಕ್ಕೆ ಕೇಂದ್ರ ಸರ್ಕಾರದವರು ಅಂಬ್ಯಾಸಿಡರ್ ಎಂಬ ಪದ ಉಪಯೋಗಿಸಿದ್ದಾರೆ. ಕೇಂದ್ರ ಸರ್ಕಾರ ಹಾಗೆ ಮಾಡಬೇಕೆಂದು ಅಪೇಕ್ಷೆ ಪಟ್ಟರೆ 23 ಅಂಬ್ಯಾಸಿಡರುಗಳಿರಬೇಕಾಗುತ್ತದೆ, ಅದ್ದರಿಂದ ಅನಾನುಕೂಲ, ಅದಕ್ಕೆ ಸಿಬ್ಬಂದಿ ಅಭಾವವೂ ಇದೆ, ಅದರಿಂದ ಒಪ್ಪುವುದಕ್ಕಾಗುವುದಿಲ್ಲ ಎಂದು ಎರಡು ಮೂರು ಸಲ ಅಭಿಪ್ರಾಯ ಸೂಚಿಸಿದ್ದಾರೆ. ಅದ್ದರಿಂದ ನಾವು ಲೈಯಾಸನ್ ಆಫೀಸರನ್ನು ನೇಮಕ ಮಾಡಬೇಕೆಂಬ ವಿಚಾರವನ್ನು ಕೈಬಿಡಬೇಕಾಗಿ ಬಂತು. ಮೂರು ತಿಂಗಳು, ಆರು ತಿಂಗಳು, ಒಂದು ವರ್ಷ ಆದರೂ ಅನೇಕ ಸಮಸ್ಯೆಗಳು ಇತ್ಯರ್ಥವಾಗದೆ ಹೆಚ್ಚಿನ ಅವಶ್ಯಕತೆ ಕಂಡುಬಂದುದರ ಮೇರೆ ಆ ರೀತಿ ಮಾಡಲಾಯಿತು. ಹಾಗೆ ಮಾಡುವುದು ಸೂಕ್ತವೆಂದು ಖಚಿತವಾದ ಅಭಿಪ್ರಾಯ ಬಂದಿದೆ.

ಇನ್ನೊಂದು ವಿಷಯ ಹೇಳಿದರು. ಅಲ್ಲಿ ಒಬ್ಬ ಪ್ರತ್ಯೇಕ ಆಫೀಸರಿರುವಾಗ ಏಕೆ ಮಂತ್ರಿಗಳು, ಅಧಿಕಾರಿಗಳು, ಸೆಕ್ರೆಟರಿಗಳು ಹೋಗಬೇಕು? ಅಲ್ಲಿರುವ ಅಧಿಕಾರಿಗಳೇ ಬೇಕಾದ ಕೆಲಸ ಮಾಡಬಹುದು ಎಂದು ಹೇಳಿದರು. ಹೀಗೆ ಇಲ್ಲಿನ ಆಫೀಸರುಗಳು ಹೋಗಬೇಕಾದ ಪ್ರಸಂಗ ತಪ್ಪಿಸುವ ಸಲುವಾಗಿಯೇ ಅಲ್ಲಿ ಕಮಿಷನರನ್ನು ನೇಮಕ ಮಾಡಿರುವಾಗ ಹಲವಾರು ಸಂದರ್ಭಗಳಲ್ಲಿ ಮಂತ್ರಿಗಳು ಹೋಗಬೇಕಾದ ಅವಶ್ಯಕತೆ ತಪ್ಪಿಹೋಯಿತು. ಕೆಲವು ಸಮ್ಮೇಳನಗಳಿಗೂ ಪ್ರತಿನಿಧಿಗಳನ್ನು ಕಳುಹಿಸುವ ಪ್ರಸಂಗ ತಪ್ಪಿಹೋಯಿತು. ಅವರೇ ಆ ಕೆಲಸವನ್ನೂ ಮಾಡಲು ಅವಕಾಶವಾಯಿತು. ಇದರಿಂದ ನನ್ನ ಅಭಿಪ್ರಾಯದಲ್ಲಿ, ನಮಗೆ ಭವದಲ್ಲಿ ಆರು ತಿಂಗಳಿಂದ ಹತ್ತಾರು ಸಲ ಬೇರೆ ಬೇರೆ ಅಧಿಕಾರಿಗಳು ಹೋಗಿ ಟಿ. ಎ., ಡಿ. ಎ., ಪಡೆಯುವ ಸಂದರ್ಭ ತಪ್ಪಿ ಹಣಕಾಸಿನ ಉಳಿತಾಯವಾಗಿದೆ. ಅದ್ದರಿಂದ ಈ ಆಫೀಸರ ನೇಮಕದಿಂದ ಸರ್ಕಾರಕ್ಕೆ ಹೆಚ್ಚು ಹಣ ಖರ್ಚಾಗಿದೆಯೆಂದು ಹೇಳುವ ಹಾಗಿಲ್ಲ. ಲೆಕ್ಕ ಕೊಡುವುದಾದರೆ ಪ್ರಾಯಶಃ ಆರು ತಿಂಗಳಿಂದ ಹತ್ತು ಸಾವಿರ ರೂಪಾಯಿಗಳು ಬೇರೆ ಅಧಿಕಾರಿಗಳಿಗೆ ಟಿ. ಎ., ಡಿ. ಎ. ಗಳಿಗಾಗಿ ಖರ್ಚಾಗುತ್ತಿದ್ದುದು ಬಹಳಮಟ್ಟಿಗೆ ಉಳಿತಾಯವಾಗಿದೆಯೆಂದು ಖಚಿತವಾಗಿ ಹೇಳಬಲ್ಲೆ.

ಆಮೇಲೆ ಇದರಿಂದ ತೊಂದರೆಯಾಗುತ್ತಿದೆಯೆಂದು ಹೇಳಿದ್ದಾರೆ. ಜನರ ದುಡ್ಡನ್ನು ಅನ್ಯಾಯ ಮಾಡಬೇಕೆಂಬ ಉದ್ದೇಶದಿಂದ ಈ ಕೆಲಸಕ್ಕೆ ಕೈಹಾಕಿಲ್ಲ. ಸಚಿವರು, ಸೆಕ್ರೆಟರಿಗಳು ಮತ್ತು ಇಲಾಖೆಗಳ ಮುಖ್ಯಾಧಿಕಾರಿಗಳು ದೆಹಲಿಗೆ ಹೋಗುವುದನ್ನು ಆದಷ್ಟು ಕಡಿಮೆ ಮಾಡುವುದಕ್ಕಾಗಿಯೇ ಇವರನ್ನು ನೇಮಕ ಮಾಡಿರುವುದು, ಖರ್ಚನ್ನು ಖೋತಾಮಾಡಿ ಮಿತವ್ಯಯ ಮಾಡುವ ದೃಷ್ಟಿಯನ್ನಿಟ್ಟುಕೊಂಡೇ ಮಾಡಿರುವುದು. ಪದೇ ಪದೇ ದೆಹಲಿಗೆ ಹೋಗುವುದರಿಂದ ಆಕ್ಷೇಪಣೆ ಬರುತ್ತದೆ, ಖರ್ಚು ಹೆಚ್ಚಾಗುತ್ತದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ತಪ್ಪಿಸುವುದಕ್ಕೆ ಏರ್ಪಾಡು ಮಾಡಿದ್ದೇವೆಯೇ ಹೊರತು ಬೇರೆಯಲ್ಲ. ಸಕಾರಣವಾಗಿದೆಯೇ ಇಲ್ಲವೇ ಎಂದು ಯೋಚನೆ ಮಾಡಿಲ್ಲ, ಮೊದಲೇ ಯೋಚನೆ ಮಾಡಿಲ್ಲವೆಂದು ಶ್ರೀ ಹಜ್ಜೇಗೌಡರು ಟೀಕೆ ಮಾಡಿದರು. ಅದು ಸರಿಯಲ್ಲ. ಮೂರು ವರ್ಷಗಳ ಹಿಂದೆಯೇ ಯೋಚನೆ ಮಾಡಿದ್ದೆವು. ಒಬ್ಬ ಅಧಿಕಾರಿಯನ್ನು ಅಲ್ಲೇ ಖಾಯಮಾಗಿ ಇಡಬೇಕಾಗಿಲ್ಲ. ಏಕೆಂದರೆ, ಹಾಗೆ ಮಾಡಿದರೆ ಅವರಿಗೆ ಅಲ್ಲಿ ಒಂದು ಕಟ್ಟಡ, ಸಿಬ್ಬಂದಿ ಮುಂತಾದುವನ್ನು ಗೊತ್ತುಮಾಡಬೇಕಾಗುತ್ತದೆ. ಅದಕ್ಕೆಲ್ಲಾ ಹೆಚ್ಚು ಖರ್ಚಾಗುತ್ತದೆ. ಆದಕಾರಣ ಈ ಅಧಿಕಾರಿಗಳು ಅವಶ್ಯಕತೆಬಿದ್ದಾಗ ಅಲ್ಲಿಗೆ ಹೋಗಿ ಹತ್ತು ಹನ್ನೆರಡು ದಿನ ಇರುತ್ತಾರೆ. ಅಲ್ಲಿಗೆ ಹೋಗುವುದಕ್ಕೆ ಮುಂಚೆ ಇಲ್ಲಿ ಸಚಿವರನ್ನೂ ಇರಾಖೆಗಳ ಮುಖ್ಯಾಧಿಕಾರಿಗಳನ್ನೂ, ಸೆಕ್ರೆಟರಿಗಳನ್ನೂ ಅವರು ವಿಚಾರಿಸಿ ಯಾವ ಯಾವ ವಿಚಾರ ಯಾವ ಯಾವ ಸ್ಟೇಜಿನಲ್ಲಿದೆ, ಯಾವುದು ತೀರ್ಮಾನವಾಗದೆ ಉಳಿದಿದೆ, ಏನು ತೀರ್ಮಾನವಾಗಬೇಕು ಎಂಬುದನ್ನೆಲ್ಲಾ ವಿಚಾರಿಸಿ ತಿಳಿದುಕೊಂಡು ಅಲ್ಲಿ ಸೆಕ್ರೆಟೇರಿಯಟ್ ಮಟ್ಟದಲ್ಲಿ ಏನೇನು ತೀರ್ಮಾನವಾಗಬೇಕೋ ಅದನ್ನು ಅಲ್ಲಿಯ ಸೆಕ್ರೆಟರಿಗಳನ್ನು ಕಂಡು ಬೇಗ ಇತ್ಯರ್ಥಪಡಿಸಿಕೊಂಡು ಯಾವ ಯಾವುದು ಸಚಿವರುಗಳಿಂದ ತೀರ್ಮಾನವಾಗಬೇಕೋ ಅದಕ್ಕೆ ತಕ್ಕ ಏರ್ಪಾಡುಗಳನ್ನೂ ಸಿದ್ಧತೆಗಳನ್ನೂ ಮಾಡತ್ತಾರೆ. ಇದರಿಂದ ಕೆಲಸಗಳು ಎಷ್ಟೋ ಸುಲಭವಾಗಿಯೂ ಶೀಘ್ರವಾಗಿಯೂ ಆಗುವುದಕ್ಕೆ ಸಹಾಯವಾಗಿವೆಯೆಂದು ಧೈರ್ಯವಾಗಿ ಹೇಳಬಲ್ಲೆ.

ಈ ಹೊತ್ತಿನ ವಿಚಾರವೊಂದನ್ನು ಹೇಳುತ್ತೇನೆ. ಬರುವ 11ನೆಯ ತಾರೀಖು ಮುಖ್ಯ ಮಂತ್ರಿಗಳ ಸಮ್ಮೇಳನ ದೆಹಲಿಯಲ್ಲಿ ನಡೆಯಬೇಕಾಗಿದೆ. ಅಲ್ಲಿ 'ಬಿ' ಸಂಸ್ಥಾನಗಳ ವಿಚಾರ, ಆರ್ಥಿಕವಿಲೀನೀಕರಣ ಮುಂತಾದ ಬಹು ಮುಖ್ಯ ವಿಚಾರಗಳು ಜರ್ಜೆಯಾಗಿ ಪರಿಶೀಲನೆಯಾಗಿ ಅಚ್ಚುರು ತೀರ್ಮಾನಕ್ಕೆ ಬರಬೇಕಾಗಿದೆ. ಹೀಗೆಯೇ ಇನ್ನೂ ಕೆಲವು ಬಹು ಮುಖ್ಯ ವಿಷಯ

(THE HON'BLE SRI K. CHENGALARAYA REDDY.)

ಗಳಿವೆ. ಈಗಾಗಲೇ ಈ ವಿಚಾರಗಳ ಸಂಬಂಧವಾಗಿ ಈ ಅಧಿಕಾರಿಗಳಿಗೆ ನೂಕ್ಕ ಸೂಚನೆಗಳನ್ನು ಕೊಟ್ಟಿದ್ದೇನೆ. ಅವರು ಪೂರ್ವಭಾವಿಯಾಗಿ ಅಲ್ಲಿಗೆ ಹೋಗಿ ಸೆಕ್ರೆಟೇರಿಯಟ್ ಮಟ್ಟದಲ್ಲಿ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡಿದ್ದರೆ, ನಾನು ಹೋಗಿ ಏಳೆಂಟು ದಿನಗಳು ಅಲ್ಲಿರುವುದಕ್ಕೆ ಬದಲಾಗಿ ಎಲ್ಲ ಕೆಲಸಗಳನ್ನು ಒಂದೆರಡೇ ದಿನಗಳಲ್ಲಿ ಮುಗಿಸಿ ವಾಪಸ್ಸು ಬರಬಹುದು. ಈಗ ನಾನು 10 ನೆಯ ತಾರೀಖು ಅಲ್ಲಿಗೆ ಹೋದರೂ ಸಾಕು, ಬೇಗ ಕೆಲಸವಾಗುತ್ತದೆ. ಅದಕ್ಕಾಗಿ ೨೦ ರು 4 ನೆಯ ತಾರೀಖು ಹೋಗುತ್ತಾರೆ. ದೆಹಲಿಯಲ್ಲಿ ಅನೇಕ ವಿಷಯಗಳು ಸೆಕ್ರೆಟೇರಿಯಟ್ ಮಟ್ಟದಲ್ಲೇ ತೀರ್ಮಾನವಾಗುತ್ತವೆ. ಮುಕ್ಕಾಲುಪಾಲು ಕೆಲಸಗಳೆಲ್ಲವೂ ಸೆಕ್ರೆಟೇರಿಯಟ್ ಮಟ್ಟದಲ್ಲೇ ಫೈಸಲಾಗುತ್ತವೆ. ಆದಕ್ಕಾರಣ ಇಂಥ ಒಬ್ಬರು ಅಧಿಕಾರಿಗಳಿರಬೇಕು. ಈಗಿನ ಸಂದರ್ಭದಲ್ಲಿ ಪತ್ರವ್ಯವಹಾರ ಎಷ್ಟೇ ನಡೆದರೂ ಬೇಗ ಮುಗಿಯುವುದಿಲ್ಲ, ಹನುಮಂತನ ಬಾಲ ಬೆಳೆದ ಹಾಗೆ ಬೆಳೆಯುತ್ತದೆ. ಇದಕ್ಕೆ ಬದಲು ಮೊಬ್ಬಾ ಒಬ್ಬರು ಹೋದರೆ ಕೆಲಸ ಕಾರ್ಯಗಳು ಬೇಗ ಆಗುತ್ತವೆ. ಇಂತಹ ನಿದರ್ಶನಗಳು ಎಷ್ಟೋ ಇವೆ. ಅವರು 365 ದಿನಗಳೂ ಅಲ್ಲೇ ಇರಬೇಕೆಂದು ನಾವು ಏರ್ಪಾಡು ಮಾಡಿಲ್ಲ. ಅಲ್ಲಿ 15 ದಿನ ಇರುತ್ತಾರೆ, ಪುನಃ ವಾಪಸು ಬಂದು ಇಲ್ಲಿ 15 ದಿನ ಇರುತ್ತಾರೆ. ಆ ಮೇಲೆ ಪುನಃ ಅಲ್ಲಿ ಕೆಲಸಗಳಿದ್ದರೆ ಹೋಗಿ ಚರ್ಚಿಸಲು ಅನುಕೂಲವಾಗುತ್ತದೆ. ಈ ಹುದ್ದೆ ಬಹಳ ದಿವಸ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹೊಸ ರಾಜ್ಯಾಂಗ ಜಾರಿಗೆ ಬಂದ ಮೇಲೆ ಅನೇಕ ಪ್ರಾಮುಖ್ಯ ವಿಚಾರಗಳು, ರಾಜ್ಯಾಂಗಕ್ಕೆ ಮತ್ತು ಆರ್ಥಿಕ ವಿಚಾರಗಳಿಗೆ ಸಂಬಂಧಪಟ್ಟ ವಿಚಾರಗಳು ತೀರ್ಮಾನ ವಾಗಬೇಕಾಗಿವೆ, ತೀರ್ಮಾನವಾಗುವುದರಲ್ಲಿವೆ. ಇವೆಲ್ಲವೂ ತೀರ್ಮಾನವಾ ಮೇಲೆ ಏನಿದ್ದರೂ ಬರಿಯ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ವಿಚಾರಗಳಿರುತ್ತವೆ. ಆಗ ಇಂತಹ ಒಬ್ಬರು ಅಧಿಕಾರಿಗಳ ಅವಶ್ಯಕತೆಯಿರುವುದಿಲ್ಲ. ಈ ಕಾರಣದಿಂದಲೇ ಈ ಹುದ್ದೆಯ ಅವಧಿಯನ್ನು ಆರು ತಿಂಗಳೆಂದು ಗೊತ್ತುಮಾಡಿದ್ದು. ಅವಶ್ಯಕತೆ ಬಿದ್ದುದರಿಂದ ಇನ್ನು ಮೂರುತಿಂಗಳು ಮಾತ್ರ ಈ ಹುದ್ದೆ ಇರಬೇಕೆಂದು ಮಾಡಿದ್ದೇವೆ. ಇನ್ನು ಮುಂದೆ ಇದನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಉದ್ದೇಶವಿಲ್ಲ. ಹಾಗೂ ಏನಾದರೂ ಒಂದೆರಡು ವಿಷಯಗಳು ತೀರ್ಮಾನವಾಗದೆ ನಿಂತುಹೋದರೆ ನಮ್ಮ ಸಂಸ್ಥಾನದ ಪರವಾಗಿ ಪಾರ್ಲಮೆಂಟಿಗೆ ಸದಸ್ಯರಾಗಿ ಹೋಗಿರುವ ಏಳು ಮಂದಿ ಸದಸ್ಯರಿದ್ದಾರೆ, ಅವರಿಗೆ ಅದನ್ನು ವಹಿಸಿ ಎಷ್ಟು ಮಟ್ಟಿಗೆ ಮಾಡಬಹುದೆಂದು ಯೋಚನೆಮಾಡುತ್ತೇವೆ. ಅವರಿಗೆ ವಿಷಯವನ್ನು ತಿಳಿಸಿದರೆ ಅವರು ಪಾರ್ಲಮೆಂಟಿನಲ್ಲಿ ಅವಶ್ಯಕತೆ ಬಿದ್ದರೆ ಚರ್ಚೆಮಾಡಬಹುದು ಅಥವಾ ಅಲ್ಲಿ ಮಂತ್ರಿಗಳನ್ನು ಕಂಡು ಮಾತನಾಡಬಹುದು. ಅದರೆ ಕೆಲವು ರಹಸ್ಯ ವಿಚಾರಗಳಿರುತ್ತವೆ. ಅವುಗಳನ್ನು ಈ ರೀತಿ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಈ ಪಾರ್ಲಮೆಂಟಿನ ಸದಸ್ಯರು ದೆಹಲಿಯಲ್ಲಿ ಒಂದೊಂದು season ನಲ್ಲಿ ಮಾತ್ರ ಇರುತ್ತಾರೆ. ಬೇರೆ ಕಾಲಗಳಲ್ಲಿರುವುದಿಲ್ಲ. ಹೀಗೆ ಎಲ್ಲ ದೃಷ್ಟಿಯಿಂದಲೂ ಈ ಹುದ್ದೆಯನ್ನು ಹಂಗಾಮಿಯೆಂದು ಗೊತ್ತುಮಾಡಿದ್ದೇವೆ.

ಇನ್ನು ನಮ್ಮ ಸರ್ಕಾರದಲ್ಲಿ ಸೆಕ್ರೆಟೇರಿಗಳ ಸಂಖ್ಯೆ ಜಾಸ್ತಿ ಎಂದು ಕೆಲವರು ಹೇಳಿದರು. ಏನಾ ಕಾರಣ ಯಾವ ಹುದ್ದೆಯನ್ನೂ ಮಾಡಲೇ ಇಲ್ಲ. ಎಲ್ಲೆಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಮಾತ್ರ ವಾಡಿದ್ದೇವೆ. ಬರಿಯ ಖೋತಾ ವಾಡಬೇಕೆಂಬ ಒಂದೇ ದೃಷ್ಟಿಯನ್ನು ಇಟ್ಟುಕೊಂಡು ಕೆಲಸಮಾಡುವುದಕ್ಕಾಗುವುದಿಲ್ಲ. ಅವಶ್ಯಕತೆ ಬಂದರೆ ಮಾಡಲೇ ಬೇಕಾಗುತ್ತದೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ರೈಲ್ವೆ ಅಡ್ವೈಜರಾಗಿ ಶ್ರೀ ನಂದಾರವರನ್ನು ನೇಮಕಮಾಡಿದೆವು. ಇದರಿಂದ ನಮ್ಮ ಸಂಸ್ಥಾನಕ್ಕೆ ಎಷ್ಟೋ ಲಕ್ಷರೂಪಾಯಿ ಉಳಿತಾಯವಾಗಿದೆ. ಅವರು ಇಲ್ಲಿ ಎರಡು ವರ್ಷ ಕಾಲ ಇದ್ದರೂ ಕೂಡ ಆರ್ಥಿಕ ವಿಲೀನೀಕರಣದಲ್ಲಿ ಅವರ ಪ್ರಯತ್ನದ ಫಲವಾಗಿ ನಮಗೆ ಶಾಶ್ವತವಾಗಿ ಎರಡು ಲಕ್ಷರೂಪಾಯಿ ಉಳಿತಾಯವಾಗುತ್ತದೆ. ಅವರ ಮೇಲೆ ನಾವು ಖರ್ಚುಮಾಡಿದ್ದು ಕೇವಲ 25ಸಾವಿರ ರೂಪಾಯಿ ಇದಕ್ಕೆ ಪ್ರತಿಫಲವಾಗಿ ನಮಗೆ 25ಲಕ್ಷರೂಪಾಯಿ ಲಾಭವಾಗಿದೆ. ಹಾಗೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ಸದ್ಯಕ್ಕೆ ಈ ಒಂದು ಉದಾಹರಣೆ ಮಾತ್ರ ಹೇಳಿದ್ದೇನೆ.

ಇನ್ನೊಂದು ವಿಷಯ. ಜನಾಬ್ ಇಮಾಂರವರು ಎರೆಕ್ಟೊರಲ್ ರೋಲ್ಸ್ ವಿಚಾರ ಹೇಳುತ್ತಿದ್ದಾಗ revising authorities ಆಗಿ ಬೇರೆ ಅಧಿಕಾರಿಗಳನ್ನು ನೇಮಕಮಾಡಿದರೆ ಕೆಲಸ ಸುಲಲಿತವಾಗಿ ನಡೆಯುತ್ತದೆಂದು ಹೇಳಿದರು. ಹೀಗೆ ಕೇಳಿದಾಗ ಅವರ ಮನಸ್ಸಿನಲ್ಲಿ ರಿಜೈಂಡ್‌ಮೆಂಟ್ ವಿಚಾರ ಇರಲಿಲ್ಲವೆ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅವಶ್ಯಕತೆಯಿಲ್ಲದೆಯಿರುವ ಹುದ್ದೆಗಳ ವಿಚಾರ ನಾವು ಮಾತ್ತನಾಡುತ್ತಿರುವುದು.

ಮಾನ್ಯ ಶ್ರೀ ಕೆ ಚೆಂಗಲರಾಯರೆಡ್ಡಿಯವರು.—ಅವಶ್ಯಕತೆಯಿದ್ದರೆ ಮಾಡಬೇಕೆಂಬುದಕ್ಕೆ ಸಮರ್ಥನೆಕೊಟ್ಟು ಅವರು ಮಾತನಾಡಿದ್ದಾರೆ. ಈ ಹುದ್ದೆಗೆ ಅವಶ್ಯಕತೆ ಇತ್ತು, ಇದರಿಂದ ಆಡಳಿತಕ್ಕೆ ಅನುಕೂಲವಾಗಿದೆ. ಹೆಚ್ಚು ಖರ್ಚಾಗುವುದಕ್ಕೆ ಬದಲು ಇದರಿಂದ ಕಡಿಮೆ ಖರ್ಚಾಗಿದೆ. ಇದು ಹೊಸ ಹುದ್ದೆಯಾದುದರಿಂದ ಈ ಡಿವ್ಯಾಂಡನ್ನು ನಭೆಯು ಮುಂದೆ ಈಗ ತರಬಾಗಿದೆ ಈ ಹುದ್ದೆಮಾಡಿದುದರಿಂದ ಬೇರೆ ಕಡೆ ಉಳಿತಾಯವಾಗಿದೆ. ಪ್ರಯಾಣ ಭತ್ಯದ ಬಾಬಿನಲ್ಲಿ ಕಡಿಮೆಯಾಗಿರಬಹುದು. ಆದಕಾರಣ ಇದರಿಂದ ಹೆಚ್ಚು ಖರ್ಚೆಂದು ಹೇಳುವುದು ಸರಿಯಲ್ಲವೆಂದು ನಾನು ಹೇಳಬೇಕಾಗಿದೆ.

ಇನ್ನೊಂದು ವಿಚಾರ. ಈಗ ಇರತಕ್ಕ ಸೆಕ್ರೆಟೇರಿಗಳ ಸಂಖ್ಯೆ ಬಹಳ ಜಾಸ್ತಿ ಎಂದು ಹೇಳಿದರು. ಕೇಂದ್ರ ಸರ್ಕಾರದಲ್ಲಿ ಒಂದೊಂದು ಮಿನಿಸ್ಟ್ರಿಗೆ ಒಬ್ಬ ಸೆಕ್ರೆಟೇರಿ, ಒಬ್ಬ ಅಸಿಸ್ಟೆಂಟ್ ಸೆಕ್ರೆಟರಿ, ಮೂರು ಜನ ಅಂಡರ್ ಸೆಕ್ರೆಟೇರಿಗಳು, ಜಾಯಿಂಟ್ ಸೆಕ್ರೆಟೇರಿಗಳು,—ಹೀಗೆಲ್ಲಾ 10–15ಜನ ಇರುತ್ತಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕೇಂದ್ರ ಸರ್ಕಾರದ ವಿಚಾರ ತೆಗೆದುಕೊಳ್ಳಬೇಡಿ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾವೂ ಅದನ್ನೇ ಅನುಸರಿಸಬೇಕೆಂದು ನಾನು ಹೇಳುತ್ತಿಲ್ಲ. ಇಲ್ಲಿ ಒಬ್ಬೆರಡರು ಸೆಕ್ರೆಟೇರಿಗಳನ್ನು ಜಾಸ್ತಿಯಾಗಿ ನೇಮಕಮಾಡಿರುವುದು ನಿಜ. ಕೇಂದ್ರ ಸರ್ಕಾರದವರಿಗೂ ನಮಗೂ ಇರತಕ್ಕ ಸಂಬಂಧದಲ್ಲಿ ಆ ವಿಷಯಗಳನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಆ ಇಬ್ಬರು ಸೆಕ್ರೆಟೇರಿಗಳನ್ನು ಹೆಚ್ಚಿಗೆ ಇಟ್ಟುಕೊಳ್ಳಬೇಕಾದ ಸ್ಥಿತಿಯಲ್ಲಿದ್ದೆವು ಎಂದು ಹೇಳುತ್ತೇನೆ. ಅದೂ ಅಲ್ಲದೆ ಹಿಂದಿನ ಮಂತ್ರಿಮಂಡಲ ಇದ್ದಾಗ ಆ ಆಚ್ಚುಕಟ್ಟಿನಲ್ಲಿ ಎಷ್ಟು ಕೆಲಸ ನಡೆಯುತ್ತಾ ಇತ್ತು. ಈಗ ಎಷ್ಟು ಕೆಲಸ ನಡೆಯುತ್ತಾ ಇದೆ, ನಾವು ಎಷ್ಟು ಕಾಗದಪತ್ರಗಳನ್ನು ವಿಲೇವಾರು

ಶ್ರೀದ್ವೇಷ ಎಂಬ ಸಮಾಚಾರವನ್ನು ಬೇಕಾದರೆ ಹೇಳುತ್ತೇನೆ. ಹಿಂದೆ ಇದ್ದ ಸೆಕ್ರೆಟೆರಿಗಳು ಎಷ್ಟು ಕಾಗದ ಪತ್ರಗಳನ್ನು ವಿಲೇವಾರಿಮಾಡುತ್ತಿದ್ದರು. ಈಗ ಸೆಕ್ರೆಟೆರಿಗಳ ಸಂಖ್ಯೆ ಜಾಸ್ತಿಯಾಗಿರುವ ಸಮಯದಲ್ಲಿ ಎಷ್ಟು ವಿಲೇವಾರಿಮಾಡುತ್ತಿದ್ದಾರೆ ಎಂಬ ಅಂಕ ಅಂಶಗಳನ್ನು ನೋಡಿದರೆ ಹಿಂದಿಗಿಂತಲೂ ಬಹಳ ಹೆಚ್ಚಾಗಿ ವಿಲೇವಾರಿಯಾಗುತ್ತಿದೆಯೇ ಹೊರತು ಕಮ್ಮಿಯಲ್ಲ ಎಂದು ಹೇಳುತ್ತೇನೆ.

ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರು.—ಸರ್ಕಾರಕ್ಕೆ ಬರುವ ಪ್ರತಿಯೊಂದು ಅರ್ಜಿಯನ್ನು ಲೆಕ್ಕಕ್ಕೆ ತೆಗೆದು ಕೊಳ್ಳಬೇಡಿ. ಆ ರೀತಿ ಲೆಕ್ಕ ಹಾಕಿದರೆ ಬಹಳ ಹೆಚ್ಚಾಗುತ್ತದೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬಂದಂಥ ಅರ್ಜಿಗಳಿಗೆ ಜವಾಬು ಕೊಡುವುದಿಲ್ಲ ಎಂದು ಒಂದು ಕಡೆ ಆಕ್ಷೇಪಣೆ ಇದೆ. ಪ್ರಾಸಂಗಿಕವಾಗಿ ಹೇಳುತ್ತೇನೆ, ಜವಾಬು ಕೊಡುವುದಿಲ್ಲ ಎಂಬುದು ಒಂದು ದೊಡ್ಡ ಅಪವಾದ ನಿಜ. ಪೋಸ್ಟಲ್ ಇಕ್ಜಿಗ್ರೇಷಿಯ ಮೇಲೆ ಫ್ರೀ ಪೋಸ್ಟೇಜ್ ಸರ್ವಿಸ್ ಹೋಯಿತು. ಒಂದಾಣೆ ಅಥವಾ ಎರಡಾಣೆ ಸ್ಟ್ಯಾಂಪು ಹಚ್ಚಿ ಜವಾಬು ಕೊಡಬೇಕಾಗುತ್ತದೆ. ಅಂದ ಮಾತ್ರಕ್ಕೇ ಅದನ್ನು ಗಮನದಲ್ಲಿಟ್ಟುಕೊಳ್ಳುವುದಿಲ್ಲ.

Sri H. B. GUNDAPPA GOWDA.—ಮೊದಲೇ ಸ್ಟ್ಯಾಂಪ್ ಕಳಿಸಿದ್ದರೆ ಜವಾಬು ಏಕೆ ಕೊಡಬೇಕು ?

The Hon'ble Sri K. CHENGALARAYA REDDY.—But they have to be dealt with.

Sri H. B. GUNDAPPA GOWDA.—It does not require any reply.

The Hon'ble Sri K. CHENGALARAYA REDDY.—Incidentally I may give the number of papers dealt with and that can be proved with facts and figures. At least they must be filed. (Laughter) It is not the creation of posts for individuals; it is not for any such insignificant reason that we are doing all this; I do earnestly appeal to the Hon'ble Members on the other side to please appreciate the position that I am putting before them.

ಅಂತೂ ಕಾಗದ ಬರೆದರೆ ಜವಾಬೇ ಕೊಡುವುದಿಲ್ಲ ಎಂದು ಆಕ್ಷೇಪಣೆಮಾಡುತ್ತಾರೆ. ನಿಮ್ಮ ಸ್ವಂತ ಕ್ಷೇಮ ಕ್ಕೋಸ್ಕರವೇ ಸ್ಟ್ಯಾಂಪ್ ಇಟ್ಟು ಕಾಗದ ಬರೆಯಿರಿ, ಜವಾಬು ಕೊಡುತ್ತೇವೆ ಎಂದರೆ ನಗುತ್ತಾರೆ.

ಯಾವುದೋ ಒಂದೆರಡು ಸೆಕ್ರೆಟೆರಿಗಳ ಜಾಗವನ್ನು ಜಾಸ್ತಿ ಮಾಡಿದ್ದೇವೆ ಎಂದು ಅದನ್ನು ಹಿಡಿದುಕೊಂಡು ಅರ್ಗ್ಯೂಮಿಸುತ್ತಿದ್ದೀರಿ. ವಜಾ ಮಾಡಿರುವುದನ್ನು ಏಕೆ ಗಮನಿಸುವುದಿಲ್ಲ ? ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್, ಅದನ್ನು ಬೇಕಾಗಿಲ್ಲ ಎಂದು ವಜಾಮಾಡಿದ್ದೇವೆ. ಕಮಿಷನರ್ ಆಫ್ ಲ್ಯಾಂಡ್ ರಿಕಾರ್ಡ್ಸ್ ಬೇಕಾಗಿಲ್ಲ ಎಂದು ಹೇಳಿ ಸೂಪರಿಂಟೆಂಡೆಂಟ್ ಆಫ್ ಲ್ಯಾಂಡ್ ರಿಕಾರ್ಡ್ಸ್ ಸಾಕೆಂದು ಮಾಡಿದ್ದೇವೆ.

I will give you cases where your administration has done it and for good reasons. Can I not pay back in the same coin what you have done in your administration ? It has got to be done in some cases if the administration has to go on and if officers have to be properly placed. Why was the Post of Inspector-General of Prisons created at one stage? You know the answer.

The Hon'ble Sri H. C. DASAPPA.—For whose benefit ?

Sri L. SIDDAPPA.—Why was the post of an Additional Secretary created ?

The Hon'ble Sri K. CHENGALARAYA REDDY.—I know how the previous administration created the post of Inspector-General of Prisons.

Sri H. B. GUNDAPPA GOWDA.—There were innumerable friends and we could not manage. (Laughter).

Janab J. MOHAMED IMAM.—To look after you very well. (Laughter).

The Hon'ble Sri K. CHENGALARAYA REDDY.—Why did you put us into jail and created a post ?

Sri H. M. CHANNABASAPPA (Mysore District—General).—Has the Hon'ble Minister got anything to say about the complaint that there are more officers than work ?

The Hon'ble Sri K. CHENGALARAYA REDDY.—I shall answer that.

When we took over the administration there were three Directors of Food Supplies for one Director of Food Supplies. Where was the need ? Hon'ble Member Sri L. Siddappa knows the reasons and I know the reasons.

Sri L. SIDDAPPA.—ಯಾವುದೋ ಒಂದೆರಡು ಸಂದರ್ಭಗಳಲ್ಲಿ ಮಾಡಿರುವುದನ್ನು ಹೇಳುತ್ತಿದ್ದೀರಿ.

***The Hon'ble Sri K. CHENGALARAYA REDDY.**—Do not give special excuses. I know the reasons and the Hon'ble Member knows the reasons. We inherited it and we abolished the two additional Directors of Food Supplies. To-day there is one Director of Food Supplies carrying on the work under exceptional and difficult circumstances, more difficult circumstances, so far as the food problem is concerned, than in the previous administration. We have abolished Rural Development Officers We have combined the work of the Rural Development Officer with that of the Registrar of Co-operative Societies. I can give you instances like these.

(THE HON'BLE SRI K. CHENGALARAYA REDDY.)

I want to make this statement that we are creating posts where necessary and we are abolishing posts where they are unnecessary. It might be that in the course of running a big administration there may be one or two superfluous officers here and there with a view to keep the administration in the proper set-up. But it is common in any administration and one swallow does not make a summer. We may give leave for one or two officers and as against that we may have 100 officers.

Sri H. B. GUNDAPPA GOWDA.—We are concerned with this officer.

Sri L. SIDDAPPA.—The Hon'ble Minister has not answered whether in other States they have this officer.

The Hon'ble Sri K. CHENGALARAYA REDDY.—In some matters other States learn from us. In some others we learn from them. I know other Governments wanted to do it. They tried it. They did not circumvent the difficulties. They were groping in the dark. After seeing our experiment they want to do it. I know Travancore had posted a Liason Officer for six months and he was functioning with ministerial status. But there is no need for Uttar Predesh Government to have such an officer because it is a stone's throw from Delhi. There is no need for Madhya Pradesh also. On the other hand we are in the extreme South and there is need for Mysore and Travancore. There is no need for States round about Delhi.

I am sorry I have taken a long time already.

ಶ್ರೀ ಬಿ. ಚನ್ನಬೈರೇಗೌಡರು.—ಮದರಾಸು ವ್ಯಾಂತ್ಯದವರೂ ಇಟ್ಟಿದ್ದಾರೆಯೆ?

ಮಾನ್ಯ-ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮದರಾಸು ಸರ್ಕಾರದ ವಿಚಾರ ನಾನು ಹೇಳುವುದು ಸೂಕ್ತವಲ್ಲ. ನಾವು ಮಾಡಿರತಕ್ಕದ್ದು ಮಾಡರಿಯಾಗಿದೆ. ಇದನ್ನೇ ಇನ್ನೂ ಕೆಲವರು ಅನುಸರಿಸೋಣ ಎಂದು ಆಲೋಚನೆ ಮಾಡುತ್ತಿದ್ದಾರೆ ಎಂಬುದನ್ನು ಮಾತ್ರ ಹೇಳುತ್ತೇನೆ. ಇಂಥಾ ಸ್ಪೆಷರ್ ಆಫೀಸರುಗಳು ಎಷ್ಟೋವೇಳೆ ಇರಬೇಕಾಗುತ್ತದೆ. ಉದಾಹರಣೆಗೆ ನಮ್ಮ ಮಿತ್ರರು ಹೇಳುತ್ತಾ ಇದ್ದರು,—ಆಡಿಟ್ ಇರಾಖೆ ತೆಗೆದು ಕೊಳ್ಳಿ—ಈ ಇರಾಖೆ ಚೇಂಜ್ ಓವರ್‌ಆಗುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ತಿರುವಾಂಕೂರು ಮತ್ತು ಮೈಸೂರಿಗೆ ಸಂಬಂಧಪಟ್ಟ ಹಾಗೆ ಸ್ಪೆಷರ್ ಆಗಿ ಒಬ್ಬ ಅಕೌಂಟ್ಸ್ ಆಫೀಸರನ್ನು ನೇಮಕಮಾಡಿದ್ದಾರೆ. ಅಂಥಾ ಆಫೀಸರ ಅವಶ್ಯಕತೆ ಇದೆ. ಆ ರೀತಿ ಮಾಡುವುದು ಬುಕ್ಕಾನಲ್ಲ; ಅನಾವಶ್ಯಕ ಅಲ್ಲ. ಅದರಿಂದ ಕೆಲಸ ಸುಸೂತ್ರವಾಗಿ ನಡೆಯುತ್ತದೆ. ಅನುಕೂಲ ಇದೆ. ಹೀಗೆ ಸ್ಪೆಷರ್ ಆಫೀಸರನ್ನು ನಾವು ನೇಮಕ ಮಾಡಿರುವುದು ಒಬ್ಬ ಆಫೀಸರಿಗೆ ಕೆಲಸ ಕೊಡಬೇಕೆಂದಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಈ ಏರ್ಪಾಡಿನಿಂದ ಕೆಲಸ ಚೆನ್ನಾಗಿ ನಡೆಯುತ್ತದೆ ಎಂದು ಹೇಳಬಲ್ಲೆ. ಇಷ್ಟು ವಿವರಣೆ ಕೊಟ್ಟ ಮೇಲೆ ಯಾವ ಭಿನ್ನಾಭಿಪ್ರಾಯವನ್ನೂ ವ್ಯಕ್ತಪಡಿಸದೆ ಇದನ್ನು ಒಪ್ಪುತ್ತೀರೆಂದು ನಂಬಿದ್ದೇನೆ.

*Mushir-ul-Mulk Janab J. MOHAMED IMAM (Chitaldrug *cum* Tumkur—Muslim).—Sir, I have heard with interest the elaborate statement made by the Hon'ble Chief Minister. Of course, it is the duty of the Government and the persons in charge of the Government to support whatever policy they have contemplated or whatever measures they have adopted.

The Hon'ble Sri K. CHENGALARAYA REDDY.—I want to know whether you are convinced or not.

Janab J. MOHAMED IMAM.—The object of moving the cut motion is only this. It is obvious that when our resources are limited and our expenditure is growing up very high, Government must undertake at the cost of some sacrifice, reasonable and necessary effective steps to keep down the level of expenditure. When the benefits or advantages can ot be equivalent to the cost and when the same work can be turned out through another agency, Government should refrain from making such appointments. The Hon'ble Chief Minister, of course, challenged the Members of the previous Government as to why they appointed this officer or that officer. But I can tell him that we never made an appointment without looking to the financial implication. We Loked to the necessity and whenever we thought that a certain appointment would involve unnecessary expenditure, we never made it. Whenever we found that a particular appointment was not necessary, we took immediate steps.....

Sri W. H. HANUMANTHAPPA (Bangalore District—General).—Sir,

*Speech not revised by the Member.

why should he take so much of responsibility to advocate for the previous Government?

Sri A. BHEEMAPPA NAIK (Chitaldrug District–General).—On a point of order, Sir. I want to know whether the Hon'ble Member is in order in making a speech after a reply is given. He should either withdraw his cut motion or press it but he cannot make a speech after he has already spoken and a reply is given by the Chief Minister. Can he again speak is all the question and I want a clarification.

The Hon'ble Sri K. CHENGALARAYA REDDY.—May I throw some light on the point? The Hon'ble Member Sri Bheemappa Naik perhaps did not hear what I said. I prefaced my speech by saying that after my giving certain information for the benefit of the Hon'ble Members, there will not be any necessity for a further debate. But as I already indicated, may be one or two members, even after hearing me, want to make their points. I think that Janab Imam has followed the cue and he wants to say something.

Sri H. B. GUNDAPPA GOWDA.—Is the point of order maintainable?

Mr. CHAIRMAN.—No. All this has happened because Sri Bheemappa Naik was not present at that time.

Janab J. MOHAMED IMAM.—So Sir, when the Government had ample resources at its disposal then, we afforded to make some appointments. But now, when the financial resources are very limited, when the times are very difficult, when we have to face bigger problems such as providing food and other amenities to people, I think, it would be better as far as possible to avoid such appointments especially when we are satisfied that such duties can be carried out through another agency. I wish to draw attention to the Government of Madras and Bombay, etc. They are very big States.

***The Hon'ble Sri K. CHENGALARAYA REDDY.**—May I point out that the cases of Part B States stand on a different footing from that of the Part A States? There, it is a sort of going concern and the relations had been established over a long period but in the case of Part B States, it is different. So many new problems regarding the Constitutional set-up, the financial integration and hundred and one things not applicable to Part A States cropped up.

***Janab J. MOHAMED IMAM.**—Under the new Constitution the very fact that other States have not adopted such measures shows that they are not anxious to follow our example however commendable it may be. Secondly, is it not possible to get the same work done through the existing officers who are in charge of the respective subjects? For example, the Hon'ble Chief Minister mentioned about the import and export control measures and said that if we had not sent him in time perhaps the country would have lost much. Well Sir, there is the conce rned Secretary, there is the Director of Industries who knows much better on the subject than the Special Officer. On such occasions the officer in charge of the subject or who is already dealing with the subject may be deputed and the minister may follow the discussion at the Ministerial level. Why should you have a Special Officer and give to him an Assistant Secretary, staff, etc.?

The Hon'ble Sri K. CHENGALA RAYA REDDY.—No Assistant Secretary or much staff is given. It is a very meagre, skeleton staff.

Janab J. MOHAMED IMAM.—He has to tour to Delhi so often and we rather feel that it is quite unnecessary at this juncture. I think that whatever he does may as well be performed by other officers of the Government who are in touch. You will be saving the pay of the officer and his staff and his expenses at Delhi. After all such problems do not arise everyday. They may arise once in a month or two. If the Hon ble Chief Minister says that such problems arise daily then I agree. Other problems will not be so important as to be discussed at the Delhi Secretariate itself. There are problems and problems and occasions and occasions and you can very well say what is importantand what is not important. After all we see Ministers going to Delhi so often and these can be *discussed*

(JANAB J. MOHAMED IMAM.)

by them when they go there. When the Special Officer was appointed the reason announced by the Government was this; "Till now the Ministers' duties involved frequent travel and visits to Delhi. So in order to avoid this, the Special Officer is appointed. (Interruption) An Hon'ble friend of mine mentions about T.A. It does not minimise the tours of the Hon'ble Chief Minister. For example, when a loan is asked for, or when there is any Integration problem to be settled the Hon'ble Minister concerned himself must go there. It cannot be done byany other Officer.

The Hon'ble Sri K. CHENGALA RAYA REDDY.—Ground work is to be done. Otherwise, we have to stay on for many days.

Janab J. MOHAMED IMAM.—I am afraid it is unnecessary expenditure. Anyhow I am glad that the Hon'ble Chief Minister has said that it is only temporary. I do hope sincerely that after three months, if not for anything else, at least in the interests of the finance of the State, they will do away with this post.

ಶ್ರೀ ಬಿ. ಹುಚ್ಚೇಗೌಡರು.—ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಭರವಸೆಗಾಗಿ ನಾನು ಅವರನ್ನು ವಂದಿಸುತ್ತೇನೆ. ಮತ್ತು.....

ಅಧ್ಯಕ್ಷರು.—ತಾವು ಈಗ ಉತ್ತರ ಕೊಡಬೇಕಾದ್ದಿಲ್ಲ. ಭಾಷಣ ಮಾಡುವ ಹಾಗಿಲ್ಲ. ತಮ್ಮ ಸೂಚನೆಯನ್ನು ತಾವು ವಾಪಸ್ಸು ತೆಗೆದುಕೊಳ್ಳಬಹುದು; ಇಲ್ಲವೇ ಒತ್ತಾಯಪಡಿಸುತ್ತೇನೆಂದು ಬೇಕಾದರೂ ಹೇಳಬಹುದು. ಅಷ್ಟೇಶಿವಾಯ ಭಾಷಣಕ್ಕೆ ಪುನಃ ಅವಕಾಶವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನನಗೆ ಮೊದಲೇ ಅವರು ಈ ವಿಚಾರ ಹೇಳಿದ್ದರೆ ಚೆನ್ನಾಗಿತ್ತು. ಆದರೆ ಒಂದೆರಡು ವಿಷಯ ತಿಳಿಸಬೇಕೆಂದಿದೆಷ್ಟೆ. ಈಗ ಕೇಳಿ ಯಾಯಿತು. ಸಭೆಯವರ ಅನುಮತಿ ಮೇರೆ ನಾನು ನನ್ನ ಕತ್ತರಿ, ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳುತ್ತೇನೆ.

The cut motion was, by leave of the Assembly, withdrawn.

Mr. CHAIRMAN.—The question is.—

"That a supplementary sum not exceeding Rs. 8,17,400 be granted to the Government to defray the charges which will come in course of payment during the year ending 31st day of March 1951, in respect of 'General Administration'."

The motion was adopted.

Demand No. 9-A—15. Pensions and Allowances.

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move:

"That a supplementary sum not exceeding Rs 50,000 be granted to the Government to defray the charges which will come in course of payment during the year ending 31st day of March 1951, in respect of 'Pensions and Allowances'."

ಇದೇನೂ ಅಂಥ ದೊಡ್ಡ ವಿಚಾರವಲ್ಲ. ಮೊದಲ ಕಮ್ಯುಟೇಷನ್ ಆಫ್ ಪೆನ್ಷನ್ಸ್. ಈ ಸಂಬಂಧವಾಗಿ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸುವಾಗ, ಅಂದಾಜು ಪ್ರಕಾರ ಇದು ಒಂದು ಲಕ್ಷ ರೂಪಾಯಿಗಳಿಗೆ ಬರಬಹುದೆಂದು ನಿರೀಕ್ಷೆ ಮಾಡಲಾಗಿತ್ತು. ಅದರಂತೆ ಈ ಬಾಬಿಗೆ ಒಂದು ಲಕ್ಷವನ್ನು ಮಾತ್ರ ಒದಗಿಸಲಾಗಿದ್ದಿತು. ಆದರೆ ಇತ್ತೀಚಿನ ನಮ್ಮ ಅನುಭವದಿಂದ ಈ ಪೊಬಲಗು ಸಾಕಾಗುವುದಿಲ್ಲವೆಂದು ಕಂಡುಬಂದಿದೆ. ಆದರೂ ಈ ಬಗ್ಗೆ ಹೆಚ್ಚಿಗೆ ಈಗಲಾದರೂ ಕೇಳಿರುವುದು ಕೇವಲ 50,000 ರೂಪಾಯಿಗಳು ಮಾತ್ರ. ಇದರಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಅಷ್ಟೇನೂ ಹೆಚ್ಚು ಕಡಿಮೆಯಾಗುವುದಿಲ್ಲ. ರಿಟ್ರೆಂಚ್‌ಮೆಂಟ್ ಇತ್ಯಾದಿ ದಾಬುಗಳ್ಯಾವುವೂ ಇದಕ್ಕೆ ಅನ್ವಯಿಸುವುದಿಲ್ಲ. ಇದು ಕಾನೂನಿಗೆ ಸಂಬಂಧಪಟ್ಟ ವಿಚಾರವಾದ್ದರಿಂದ ಈಗ ತಮ್ಮ ಮುಂದೆ ತರಲಾಗಿದೆ. ಇದರ ಬಗ್ಗೆ ಯಾರೂ ಕತ್ತರಿ ನಿರ್ಣಯ ವಗ್ಗೆರೆ ತಂದಿಲ್ಲ. ಆದುದರಿಂದ ದಯೆಯಿಟ್ಟು ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—There are no cut motions under this Demand. (After a pause).

The question is:

"That a supplementary sum not exceeding Rs. 50,000 be granted to the Government to defray the charges which will come in course of payment during the year ending 31st day of March 1951, in respect of 'Pensions and Allowances."

The motion was adopted.

Demand No. 10—16. Stationery and Printing.

The Hon'ble Sri K. T. BHASHYAM (Minister for Law and Labour).—Sir, on the recommendation of His Highness the Maharaja, I beg to move:

"That a supplementary sum not exceeding Rs. 100 be granted to the Government to defray the charges which will come in course of payment during the year ending 31st day of March 1951, in respect of 'Stationery and Printing'.

ಈಗ 'ಸ್ಟೇಷನರಿ ಮತ್ತು ಪ್ರಿಂಟಿಂಗ್' ಕೆಲಸ ಹೇಗೆ ನಡೆಯುತ್ತಿದೆಯೆಂದರೆ, ಪ್ರಿಂಟಿಂಗ್ ಪ್ರೆಸ್ಸಿನಿಂದ ಪಠ್ಯ ಪುಸ್ತಕಗಳು ಆಚ್ಚಾಗಿ ಮುದ್ರಣಾಲಯದಿಂದ ಹೊರ

ಬಿದ್ದ ಕೂಡಲೆ ಅವುಗಳನ್ನು ಮಾರಾಟಮಾಡಿ, ಆ ಬಗ್ಗೆ ಮಾಡಿದ್ದ ಖರ್ಚನ್ನು, ಬಂದ ಹಣದಿಂದ ನರಿಗಟ್ಟಿಕೊಳ್ಳ ರಾಗುತ್ತಿದೆ. ಹೀಗೆ ಮೊದಲು ನಮ್ಮಿಂದ ಖರ್ಚಾಗ ಬಹುದಾದ ಮೊಬಲಗು, ಈ ಬಾಬಿನಲ್ಲಿ 2 ಲಕ್ಷ ರೂಪಾ ಯಿಗಳಾದರೆ ಸಾಕಾಗಬಹುದೆಂದು ಒಂದು ಅಂದಾಜು ಮಾಡರಾಗಿತ್ತು. ಆದರೆ ಜನಗಳಿಗೆ ಪಠ್ಯ ಪುಸ್ತಕ ಗಳು ಸಕಾಲಕ್ಕೆ ಸಾಕಷ್ಟು ದೊರೆಯುತ್ತಿಲ್ಲವೆಂದು ಒತ್ತಾಯ ಬಂದುದರಿಂದ ಚೆಕ್‌ಸ್ಟ್ ಬುಕ್ಕುಗಳನ್ನು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಾಗಿ ಮುದ್ರಿಸಬೇಕಾಗಿ ಬಂದಿತು. ಇದಕ್ಕೆ ಒದಗಿಸಿದ್ದುದರಲ್ಲಿ ಈಗಾಗಲೆ 1 ಲಕ್ಷ 83 ಸಾವಿರ ರೂಪಾಯಿಗಳು ಖರ್ಚು ಬಿದ್ದುಹೋಗಿದೆ. ಸಾಕಾದಷ್ಟು ಪಠ್ಯಪುಸ್ತಕಗಳು ಇನ್ನೂ ಆಚ್ಚಾಗಿರುವುದಿಲ್ಲ. ಆದುದರಿಂದ ಈ ಬಾಬಿಗೆ ಈಗ ಇನ್ನೂ ಕೊಂಚ ಹಣ ಬೇಕಾಗಿರುತ್ತೆ. ಈಗ ಅಡ್ವಾನ್ಸು ಮಾಡಿರುವುದನ್ನು ಮಾರಾಟ ಮಾಡಿದ ಕೂಡಲೆ ಮತ್ತೆ ಭರ್ತಿಮಾಡರಾಗುತ್ತೆ.

It is a token grant of Rs. 100. We may realise even more or we may realise less. we may print to the extent of more than Rs. 2 lakhs; may be, we will print to the extent of Rs. 4 lakhs. But there is no need for all the amount because, as we draw, so we sell on the other side and we cr editand we expect savingsa lso. Therefore, a token grant is asked for.

Mr. CHAIRMAN.—Motion moved:

"That a supplementary sum not exceeding Rs. 100 be granted to the Government to defray the charges which will come in course of payment during the year ending 31st day of March 1951, in respect of 'Stationery and Printing.'"

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ತಾವು ಹಾಗೆ ಅಚ್ಚುಹಾಕಿಸತಕ್ಕ ಪುಸ್ತಕಗಳನ್ನು ಅಸಲು ಬೆರೆಗೇ ಮಾರುತ್ತೀರೋ ಅಥವಾ ರಾಛವನ್ನೇ ನಾದರೂ ಅದಕ್ಕೆ ಸೇರಿಸಿ ಮಾರಾಟ ಮಾಡು ತ್ತೀರೋ!

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ರಾಛವ ನ್ನೇನೂ ಸೇರಿಸುವುದಿಲ್ಲ. ಕೆಲವು ಕಮಿಷನ್ ಏಜಂಟರು ಗಳಿದ್ದಾರೆ. ಅವರ ಕಮಿಷನ್ ಇತ್ಯಾದಿಗಳನ್ನು ಮಾತ್ರ ಆ ಮಾರಾಟದ ಬೆಲೆಗೆ ಸೇರಿಸಿ ಮಾರರಾಗುತ್ತೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಪುಸ್ತಕಗಳ ಅಚ್ಚುಹಾಕುವ ಕೆಲಸವನ್ನು ತಾವು ಸರ್ಕಾರಿ ಮುದ್ರ ಣಾಲಯ ಒಂದಕ್ಕೇ ಕೊಡುತ್ತೀರೋ ಅಥವ ಬೇರೆಯವ ರಿಗೂ ಕೊಡುತ್ತೀರೋ!

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಖಾಸಗೀ ಮುದ್ರಣಾಲಯದವರಿಗೂ ಕೊಡುತ್ತೇವೆ.

Mr. CHAIRMAN.—There are no cut motions. The question is:

"That a supplementary sum not exceeding Rs. 100 be granted to the Government to defray the charges which will come in course of payment during the year ending 31st day of March 1951, in respect of 'Stationery and Printing'."

The motion was adopted.

Demand No. 11—17. Miscellaneous

The Hon'ble Sri H. C. DASAPPA. (Minister for Finance and Industries).—Sir, on the recommendation of His Highness the Maharaja, I beg to move:

"That a supplementary sum not exceeding Rs. 21,000 be granted to the Government to defray the charges which will come in course of payment during the year ending 31st day of March 1951, in respect of 'Miscellaneous'."

ಇದರಿಂದ ಸಾರ್ವಜನಿಕರಿಗೆ ಸಹಾಯವಾಗುವು ದೆಂದು ಹೇಳಿದೆ. ಈಗಾಗಲೇ ವರ್ಷ್‌ವರ್ಷ್ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಿತ್ತು. ಅವರು ಇನ್ನೂ ಸ್ವಲ್ಪ ಹೆಚ್ಚಾಗಿ ಕೊಡಬೇಕೆಂದು ಕೇಳಿದ್ದರು. ಆದರೆ ಅವರೂ ಕೊಡಬೇಕು, ಸರ್ಕಾರದವರೂ ಕೊಡ ಬೇಕು ಎಂಬ ನೀತಿಯನ್ನು ನಾವು ಅನುಸರಿಸಿದ್ದೇವೆ. ಅವರು ದ್ವಿಗುಣವಾಗಿ ಕೊಡಬೇಕು, ಎರಡಕ್ಕೆ ನಾಲ್ಕು ಕೊಡಬೇಕು ಎಂದು ಕೇಳಿದರು. ನಾವು ಅದನ್ನು ಸ್ವಲ್ಪ ಖೋತಮಾಡಿ ದ್ವಿಗುಣ ಎನ್ನುವುದಕ್ಕೆ ಬದಲು ಶೇಕಡ ಒಂದೂವರೆಯಷ್ಟು ಜಾಸ್ತಿಮಾಡಬಹುದು. ಅಂದರೆ ಅವರು ಎರಡು ಸಾವಿರ ವಸೂಲು ಮಾಡಿದರೆ ನಾವು ಮೂರು ಸಾವಿರ ಕೊಡಬೇಕೆಂದು ಮಾಡಿದ್ದೇವೆ. ಅವರಿಗೆ ಕೊಡುತ್ತಿದ್ದ ಎರಡು ಸಾವಿರಕ್ಕೆ ಇನ್ನೊಂದು ಸಾವಿರ ಹೆಚ್ಚಿಸಬೇಕೆಂದು ಮಾಡಿದೆ.

ಎರಡನೆಯ ವಿಚಾರ. ಇದಕ್ಕೆ ಮಾನ್ಯ ಸದಸ್ಯರ ಸಂಪೂರ್ಣ ಒಪ್ಪಿಗೆ ದೊರೆಯುತ್ತದೆಂದು ಹೇಳಬಹುದು. ಬಹುತಃ ಇದು ನಿಮ್ಮೆದುರಿಗೆ ಬಂದಿದ್ದರೆ ಇನ್ನೂಹೆಚ್ಚಾಗಿ ಕೊಡೋಣ ಎಂದು ನಿರ್ಧರಿಸುತ್ತಿದ್ದಿರೋ ಏನೋ. ಅಸ್ಪಾವಿನ ಒಂದು ದುಸ್ಥಿತಿ ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತೇ ಇದೆ. ಮುಖ್ಯ ಮಂತ್ರಿಗಳ ಭೂ ಕಂಪದ ಪರಿಹಾರನಿಧಿಗೆ 20 ಸಾವಿರ ರೂಪಾಯಿ ಕೊಡ ಬೇಕೆಂಬ ಬಗ್ಗೆ ಅನುಮತಿ ಪಡೆಯಲು ಒಂದು ಸೂಚನೆ ಯನ್ನು ತಮ್ಮ ಮುಂದೆ ಇಟ್ಟಿದೆ, ಅದು ಒಂದು ಒಳ್ಳೆಯ ಸೇವೆಯಾದ್ದರಿಂದ ಮಾನ್ಯ ಸದಸ್ಯರು ಒಪ್ಪಿಗೆ ಕೊಡ ಬೇಕೆಂದು ಕೇಳಿದೆ.

Mr. CHAIRMAN.—Motion moved.—

"That a supplementary sum not exceeding Rs. 21,000 be granted to the Government to defray the charges which will come in course of payment during the year ending 31st day of March 1951, in respect of 'Miscellaneous'."

Sri Kadidal MANJAPPA (Shimoga-General).—What are the activities of the Civic and Social Progress Association?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಿವಿಕ್ ಮತ್ತು ಸೋಷಿಯರ್ ಪ್ರೋಗ್ರೆಸ್ ಅಸೋಸಿಯೇಷನ್ ಎಷ್ಟೋ ದಿವಸಗಳಿಂದ ಕೆಲಸ ಮಾಡುತ್ತಿದೆ.

Sri H. B. GUNDAPPA GOWDA.—I would like to know if the Government have got any agency to find out what kind of work is being done there.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರ ದುರ್ಗ ಜಿಲ್ಲೆ).—ಈಗ ಅವರು ಏನು ಕೆಲಸ ಮಾಡುತ್ತಿ ದ್ದಾರೆಂದು ಕೇಳುತ್ತಿದ್ದಾರೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಮಾನ್ಯ ಸದಸ್ಯರಿಗೆ ಗೊತ್ತೇ ಇರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಹಣ ಕೊಡುವುದಕ್ಕೆ ಮುಂಚೆ ಇದನ್ನೆಲ್ಲಾ ವಿಚಾರಮಾಡಬೇಕಾಗಿತ್ತಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಮಗೆ ಗೊತ್ತಿರುವ ಹಾಗೆ ಅವರ ಚಟುವಟಿಕೆಗಳಿಂದರೇ ಶ್ರೀ ಡಿ. ಎಸ್ ಮಲ್ಲಪ್ಪನವರ ಮನೂದೆ ಕೂಡ ಅಂಗೀಕಾರ ವಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದೆಲ್ಲಾ ಗೊತ್ತು. ಆದರೆ ಇದನ್ನು ವಿಚಾರ ಮಾಡಲು ಯಾವು ದಾದರೂ ಏಜೆನ್ಸಿ ಇದೆಯೆ?

Whether it is working satisfactorily or otherwise, I would like to know. What are the agencies which the Government have got to find out its achievements?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಹಾಲಿನ ಕೇಂದ್ರಗಳನ್ನಿಟ್ಟಿದ್ದಾರೆ ಮತ್ತು ಇತರ ಸಭೆಗಳಿಗೆ ಸಹಾಯ ಮಾಡುತ್ತಿದ್ದಾರೆ. ಅವರು ಆಗಾಗ್ಗೆ ಮಾಟಿಂಗುಗಳನ್ನು ಮಾಡಿ ಪ್ರಚಾರ ಮಾಡು ತ್ತಾರೆ. ಬೇಕಾದರೆ ವರ್ಷದ ವರದಿಯನ್ನು ತರಿಸಿ ನೋಡಿ ನಿರ್ಧಾರಮಾಡಿ ಕೊಳ್ಳಬಹುದು. ಆದ್ದರಿಂದ ಒಂದು ಸಾವಿರ ಹೆಚ್ಚಿಗೆ ಕೊಡುವುದು ಸದ್ವಿನಿಯೋಗ ವಾಗುತ್ತದೆಂದು ಧರವಸೆ ಕೊಡಬಹುದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದೇನೋ ಸರಿ. ಆದರೆ ಯಾವುದಾದರೂ ಗ್ರಾಂಟು ಕೊಡುವಾಗ ಆದನ್ನು ಯಾವುದಾದರೂ ಏಜೆನ್ಸಿ ಮುಖಾಂತರ ತನಿಖೆ ಮಾಡುತ್ತೀರಾ ಎಂಬುದನ್ನು ಹೇಳಬೇಕು. I would like to know whether it is working satisfactorily or otherwise. What are the things that have been achieved?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ರೀತಿ ಪರಿಶೀಲನೆಯಾಗುತ್ತದೆಯೆಂಬುದಕ್ಕೆ ನಿದರ್ಶನ ಕೊಡ ಬಲ್ಲೆ. ಅಲ್ಲ ಅದು ಪ್ರಾರಂಭವಾಗಿ ಕಾರ್ಯಸಿದ್ಧಿನವರೆಗೆ ಹೋಗಿ ಅಲ್ಲ ತೀರ್ಮಾನವಾಗಿದೆ. ನಾವು ಪರಿಶೀಲನೆ ವಾಗ ವರದಿಯನ್ನು ತರಿಸಿ ನೋಡಿ ತೀರ್ಮಾನಮಾಡಿದೆ ಯೆಂದು ಹೇಳಬಹುದು.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಈ ಸಂಸ್ಥೆಯು ಬೆಂಗಳೂರಿನಲ್ಲಿ ಬನಶಂಕರಿಯಲ್ಲಿ ಶ್ರೀ ಗುಂಡಪ್ಪಗೌಡರ ಮನೆಯ ಹತ್ತಿರವೇ ಇದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದನ್ನು ನೋ ಡಿದೆ, ಆದರೆ ಇನ್ನೂ ಅಲ್ಲಗೆ ಹೋಗಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಈ ಸಂಸ್ಥೆಗೆ ಐಸಾಕ್ ರವರು ಜನರಲ್ ಸೆಕ್ರೆಟರಿಯಾಗಿ ಬಹಳ ದಕ್ಷತೆಯಿಂದ ಕೆಲಸ ನಡೆಸಿಕೊಂಡು ಬರುತ್ತಿರುವುದು ಗೊತ್ತೇ ಇದೆ. ಯಾವಾಗಲೂ ಸುಮಾರು 20-30 ಜನ ನಿರಾಶ್ರಿತರಿಗೆ ಯಾವ ಸಹಾಯವೂ ಇಲ್ಲದೇ ಇರುವವರಿಗೆ ಮತ್ತು ದಿಕ್ಕಿಲ್ಲದ ಹೆಣ್ಣುಮಕ್ಕಳಿಗೆ ಸಹಾಯ ನೀಡುತ್ತಿದೆ. ಅವ ರನ್ನು ಕರದುಕೊಂಡು ಹೋಗಿ ಆಸೆ ಹುಟ್ಟಿಸಿ ಅವರಿ ಗುಂಟಾಗಿರುವ ವಿಶೇಷ ಅನಹ್ಯಕರವಾದ ಖಾಯಿಲೆಗಳ ನ್ನೆಲ್ಲಾ ವಾಸಿಮಾಡಿ ಆರೋಗ್ಯವನ್ನು ಕಾಪಾಡುವುದೂ ಅಲ್ಲದೆ ಬಟ್ಟೆ ಬರೆ ಕೊಟ್ಟು ಜೀವನೋಪಾಯವನ್ನು ಸಹ ಕಲ್ಪಿಸಲು ಏರ್ಪಾಡು ಮಾಡಿದ್ದಾರೆ. ನನಗೆ ಗೊತ್ತಿ ರುವ ಹಾಗೆ ಕೈಲಿ ನೂಲು ತೆಗೆಯುವುದು, ಬಟ್ಟೆ ತಯಾ ರಿಸುವುದು, ಬಣ್ಣ ಹಾಕುವುದು ಮುಂತಾದ ಕೆಲಸಗಳು ಮತ್ತು ಕಸೂತಿ ವಗೈರೆ ಕೆಲಸಗಳು ಇವುಗಳನ್ನು ಅಲ್ಲ ಕಲಸುತ್ತಿದ್ದಾರೆ. ಅಲ್ಲದೆ ಅನೇಕ ಹರಿಜನರೂ ಕೂಡ ಆಶ್ರಯ ಪಡೆದು ಸಹಾಯ ಹೊಂದುತ್ತಿದ್ದಾರೆ. ದಿಕ್ಕಿಲ್ಲದೆ ಇರುವವರು ಬಂದರೆ ಅವರಿಗೂ ಕೂಡ ತಕ್ಕ ಸಹಾಯನೀಡುತ್ತಿದ್ದಾರೆ. ಅಲ್ಲ ಹಿಂದೆ ಶಾಸನಸಭೆಯ ಮಾನ್ಯಸದಸ್ಯರಾಗಿದ್ದ ಟಾಜ್‌ಖಿರಾನ್‌ರವರು ಮತ್ತು ಇನ್ನೂ ಅನೇಕರು ಸದಸ್ಯರಾಗಿದ್ದು ಬಹಳ ದಕ್ಷತೆ ಯಿಂದ ಕೆಲಸಮಾಡುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಹಾಲಿನ ಕೇಂದ್ರಗಳನ್ನು ತೆರದು ಮಕ್ಕಳಿಗೆ ಹಾಲು ಕೊಡುತ್ತಿದ್ದಾರೆ. ಶ್ರೀ ಮಲ್ಲಪ್ಪ ನವರ ಕಾನೂನಿನಿಂದ ಕೂಡ ಬಹುಮಟ್ಟಿಗೆ ಫಲ ಪಡೆ ಯುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಇದಕ್ಕೆ ಒಂದೂವರೆಯಷ್ಟು ವಸೂಲುಮಾಡಿದ್ದರೆ ಮೇಲೆ ಕೊಡ ಬೇಕೆಂದು ಹೇಳುವುದು ನಿಜವಾಗಿಯೂ ಸಾರ್ಥಕವಾ ಗುತ್ತದೆ. ಅವರು ಪ್ರಯತ್ನಪಟ್ಟು ಹೆಚ್ಚು ಹಣ ವಸೂಲುಮಾಡಿದರೆ ಅದರ ಜೊತೆಗೆ ಸರ್ಕಾರದ ವರೂ ಸಹಾಯಮಾಡಬೇಕಾದ್ದು ಧರ್ಮ. ಅವರು ಮಾಡುವ ಅನೇಕ ಉತ್ತಮ ಕೆಲಸಗಳಲ್ಲಿ ಅನಾಥ ಮಕ್ಕ ಳಿಗೆ ಕನಬು ಹೇಳಿಕೊಡುವುದೂ ಅಲ್ಲದೆ ಅವರನ್ನು ವಿದ್ಯಾವಂತರನ್ನಾಗಿಯೂ ಮಾಡಿದ್ದಾರೆ. ಒಂದುಸಲ ಅನಕ್ಷರಸ್ಥರಾದ ಸುಮಾರು 20 ಹುಡುಗರಿಗೆ ವಿದ್ಯೆ ಯನ್ನು ಕಲಿಸಿದರು. ಅವರು ಮಾಡುತ್ತಿರುವ ಕೆಲಸ ಇಷ್ಟೇ ಎಂದು ತಿಳಿದುಕೊಳ್ಳಬೇಕಾಗಿಲ್ಲ. ಅವರ ವರದಿ ಯಲ್ಲಿ ಕೂಡ ಅನೇಕ ಉಪಯುಕ್ತ ಕೆಲಸಗಳು ನಮೂ ದಾಗಿವೆ. ಸದಸ್ಯರು ವರದಿಯನ್ನು ತರಿಸಿ ನೋಡ ಬಹುದು. ಒಟ್ಟಿನಲ್ಲಿ ನನಗೆ ಗೊತ್ತಿರುವಂತೆ ಸಮರ್ಪ ಕವಾದ ಕೆಲಸ ನಡೆಯುತ್ತಿದೆಯೆಂದು ಹೇಳುವುದರಲ್ಲಿ ಸಂಶಯವಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಏಜೆನ್ಸಿ ಯಾವು ದಾದರೂ ಅದನ್ನೆಲ್ಲಾ ಉಸ್ತುವಾರಿ ನೋಡುತ್ತಿದೆಯೇ ಯೆಂಬುದನ್ನು ಹೇಳಲಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗ ಮಾನ್ಯಸದಸ್ಯರು ಸೂಚಿಸಿದಂತೆ ಅಲ್ಲಿನ ಹಣ ಖರ್ಚಾಗು ತ್ತಿದೆಯೆಂದು ಹೇಳಬಹುದು. ಬೇಕಾದರೆ ಒಂದೆರಡು ತಪಶೀಲು ಕೊಡಬಹುದು. ಹಾಲು ವರ್ಷಕ್ಕೆ ರೂ. 2,129—2—0 ಯಷ್ಟು ಎನಿಯೋಗವಾಗುತ್ತಿದೆ. ಪಾಠಶಾಲೆ ಮತ್ತು ಅಸೋಸಿಯೇಷನ್‌ಗಳಿಗಾಗಿ 1,400 ರೂಪಾಯಿಗಳ ಗ್ರಾಂಟನ್ನು ಕೊಡುತ್ತಿದ್ದಾರೆ. ಹೀಗೆ ಅವರು ಖರ್ಚುಮಾಡುತ್ತಿರುವುದು ವ್ಯಕ್ತವಾಗಿದೆ. ಅಶಕ್ತಪೋಷಕಸಭೆಯ ಕಟ್ಟಡದಲ್ಲಿ ಆಫೀಸನ್ನಿಟ್ಟು ಕೊಂಡು ಅಲ್ಲೇ ಮೇಲ್ವಿಚಾರಣೆ ನೋಡಿಕೊಳ್ಳುವ ಹಾಗೆ ಕಾಣುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದವರು ಒಂದೂವರೆಯಷ್ಟು ಕೊಡಬೇಕೆಂದು ಯಾವ ಆಧಾರದ ಮೇಲೆ ತೀರ್ಮಾನಮಾಡಿದೆ? ಎರಡರಷ್ಟು ಅಥವಾ ಮೂರರಷ್ಟು ಎಂದು ಪೂರ್ಣ ಸಂಖ್ಯೆಯ ಪ್ರಕಾರ ಏಕೆ ಗ್ರಾಂಟು ಕೊಡಬಾರದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಆಗಲೇ ಉತ್ತರ ಹೇಳಿದೆ. ಅವರು ಒಂದು ಸಾವಿರ ವಸೂಲು ಮಾಡಿದರೆ ನಾವು ಒಂದು ಸಾವಿರ ಕೊಡಬೇಕೆಂದಿತ್ತು. ಈಗ ಅದನ್ನು ಒಂದೂವರೆ ಮಾಡಿದೆ. ಅವರು ಹೇಳುವುದು ಎರಡುಸಾವಿರ ವಸೂಲು ಮಾಡಿದರೆ 4 ಸಾವಿರ ಕೊಡಬೇಕು ಎಂದು, ಅದಕ್ಕೆ ಆಗುವುದಿಲ್ಲ, 3 ಸಾವಿರ ಕೊಡುತ್ತೇವೆಂದು ಹೇಳಿ ದ್ದೇವೆ. ಇದೇ ಈಗ ಮಾಡಿರುವ ನಿಯಮ.

ಶ್ರೀ ಬಿ. ಹುಚ್ಚೇಗೌಡರು.—ಒಂದೊಂದಕ್ಕೆ ಒಂ ದೊಂದು ನೀತಿಯನ್ನನುಸರಿಸಿದರೆ ಸಂಸ್ಥೆಗಳು ಮುಂದೆ ಬರುವುದು ಹೇಗೆ? ಇಷ್ಟು ಗ್ರಾಂಟು ಬರುತ್ತದೆ ಎಂದು ಗೊತ್ತಿಲ್ಲದೆ ಚಂದಾ ಎತ್ತುವುದಕ್ಕೂ ಆಗುವುದಿಲ್ಲ.

ಅಧ್ಯಕ್ಷರು.—ಇದರಲ್ಲಿ ಅವರು ವಸೂಲುಮಾಡಿದ ಒಂದೂವರೆಯಷ್ಟು ಸರ್ಕಾರದ ಗ್ರಾಂಟ್ ಎಂದು ತಿಳಿಸಿದೆ.

ಶ್ರೀ ಬಿ. ಹುಚ್ಚೇಗೌಡರು.—ಸರ್ಕಾರದವರು ಸಹಾಯಮಾಡಿದರೆ ಎಷ್ಟೋ ಸಂಸ್ಥೆಗಳು ಮುಂದೆ ಬರುತ್ತವೆ. ಆದರೆ ವರ್ಷಕ್ಕೆ ಇಷ್ಟು ದ್ರವ್ಯಸಹಾಯಕೊಡುತ್ತೇವೆಂದು ಕಡ್ಡಾಯವಾಗಿ ಗೊತ್ತುಮಾಡಿಲ್ಲ. ಕೆಲವು ಸಂದರ್ಭಗಳಲ್ಲಿ ಅವರು ವಸೂಲುಮಾಡಿದ್ದರಲ್ಲಿ ಅರ್ಧ ಕೊಡುತ್ತಾರೆ.

Sri H. K. VEERANNA GOWDA (Mandya District—General).—I rise to a point of order, Sir. Is the Hon'ble Member raising a debate on this issue or is he seeking an explanation?

Sri B. HUTCHE GOWDA.—I am seeking an explanation.

Sri H. K. VEERANNA GOWDA.—But he is making a speech.

Sri B. HUTCHE GOWDA.—On what basis one and a half times has been fixed?

Sri K. SAMPANGIRAMIAH (Kolar District—General).—He is taking objection to vulgar fractions, half and so on.

(At this stage Sri W. H. Hanumanthappa attempted to speak from a seat, not the one alloted to him).

Sri H. B. GUNDAPPA GOWDA.—Sir, can the Hon'ble Member speak from any seat other than the seat allotted to him?

Mr. CHAIRMAN.—The Hon'ble Member Sri Hanumanthappa may go to his seat.

(The member then went to his seat).

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಅಲ್ಲಿಗೆ ಸರ್ಕಾರದವರು ಎರಡುಸಾವಿರ ಚಿಲ್ಲರೆ ರೂಪಾಯಿ ಸಹಾಯಕೊಡುತ್ತೇವೆ, ಇತರ ಸ್ಕೂಲುಗಳಿಗೂ ಕೊಡುತ್ತಿದ್ದೇವೆಂದು ಹೇಳಿದರು. ಯಾವ ಸ್ಕೂಲುಗಳಿಗೆ ಕೊಡುತ್ತಿದ್ದಾರೆ?

The Hon'ble Sri K. T. BHASHYAM.—There are students there who get scholarship from them. I have seen myself students being fed, clothed and sheltered and given some money for purchase of books and slates. They are doing good work. We cannot give facts and figures of all these details. What they do, we can say. They do very good work.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಅವರಿಗೆ ಸಹಾಯಮಾಡುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಇತರ ಸಂಸ್ಥೆಗಳಿಗೂ ಸರ್ಕಾರದವರು ಇದೇ ರೀತಿ ಸಹಾಯಮಾಡುತ್ತಿಲ್ಲವಲ್ಲ ಎಂಬುದೇ ನಾನು ಕೇಳುವುದು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇತರ ಸಂಸ್ಥೆಗಳಿಗೂ ಕ್ಯೆಲಾದಮಟ್ಟಿಗೂ ಸಹಾಯಮಾಡುತ್ತೇವೆ.

Mushir - ul - Mulk J. MOHAMED IMAM (Tumkur *cum* Chitaldrug—Muslim).—It is no doubt a laudable object, Sir, we had similar institutions for a long time. We had the Temperence Association.

The Hon'ble Sri H. C. DASAPPA.—Janab Imam to talk of Temperance!!

Janab J. MOHAMED IMAM.—Yes, Temperance Association with which some 'Amma' was connected. Government also was giving a similar grant. I do not know whether that grant is merged with this, or whether it is separately kept.

The Hon'ble Sri H. C. DASAPPA.—It is a separate grant.

Janab J. MOHAMED IMAM.—There are certain very good and useful institutions. For example, temperance movement, adult literacy campaign, *Vayaskara Shikshana paddathi* (ವಯಸ್ಕರ ಶಿಕ್ಷಣ ಪದ್ಧತಿ), why not all these brought under one institution?

Mr. CHAIRMAN.—Under what name?

Janab J. MOHAMED IMAM.—It may be called 'Social Service League' (laughter). I think it will be more useful if all these institutions are brought together under one institution to carry on the work.

Secondly, there is always a complaint that some of these beneficial measures are confined only to cities and towns. Why not establish some of these institutions in the rural areas? For example, this Civic and Social Progress Association has activities only in the Cities.

The Hon'ble Sri R. CHENNIGARAMIAH (Minister for Local Self-Government).—It is due to some philanthrophic gentlemen who have taken up this work and they came forward to establish this institution.

Janab J. MOHAMED IMAM.—Yes, these institutions must extent to the entire State and not confined to Cities.

The Hon'ble Sri R. CHENNIGARAMIAH.—Some retired officers were responsible for this. They approached the Government and got this grant.

Janab J. MOHAMED IMAM.—Let them extend their activities to rural areas also. There are retired officers and if they have nothing else to do, let them bestow their attention towards the amelioration and progress of the people throughout the State.

The Hon'ble Sri R. CHENNIGARAMIAH.—I would request Janab Imam to take up this work. Let him start a centre at Jagalur and approach the Government, if necessary for grant. We will then consider the desirability of giving the grant.

Sri L. SIDDAPPA (Shimoga District—General).—Please do not encourage such things. You may have a number of applications.

Janab J. MOHAMED IMAM.—When you give the grant, it is presumed that the public money is spent on the institution and therefore these institutions belong to the entire State, because people living throughout the State subscribe to the Exchequer. So, as far as possible Government should give grant to such institutions whose activities are spread over the entire State. But I find Sir, now that such grants are given not to one institution but to a number of institutions in the City of Bangalore.

Mr. CHAIRMAN.—There was no other demand and there was no refusal.

Janab J. MOHAMED IMAM.—I know Sir, that in many district and taluk headquarters there are many social service institutions at work requiring such grant. For instance, I know that in Chitaldrug there are many milk centres which were started with a view to providing healthy milk to the children of poor people. I also know that many measures useful to people were undertaken but for want of Government aid these institutions could not survive. And I am aware also that a few years ago there were Nursery Schools started in important places, in Davanagere, Chitaldrug, etc. Even these institutions were doing very useful work.

The Hon'ble Sri R. CHENNIGARAMIAH.—They were also getting grants from Municipalities and local bodies.

Janab J. MOHAMED IMAM.—Yes, they were getting grants from local bodies and they were getting aid from Government also.

Lastly, only one thing, Sir. I feel that proper arrangements are not made for the conveyance of members of the House. Somehow it is very discouraging for some of us that members are absent and I think there must be some reason for their absence. I feel that if only they get proper conveyance and in time many of them would like to remain in the Chamber and attend to the deliberations of this House till the end.

Mr. CHAIRMAN.—The question is:

"That a supplementary sum not exceeding Rs. 21,000 be granted to the Government to defray the charges which will come in course of payment during the year ending 31st day of March 1951, in respect of 'Miscellaneous'."

The motion was adopted.

Announcement regarding postponement of time and date for the receipt of candidature applications to the Estimates Committee and the Standing Committees.

Mr. CHAIRMAN (Sri S. Rangaramiah).—In view of the postponement of the date and hour for the receipt of candidature applications in respect of elections to the Estimates' Committee and the Eleven Standing Committees, the elections fixed for the 29th January 1951 are postponed to the 31st January 1951 and the elections fixed for the 30th January are postponed to 1st February 1951. The time for election will be announced later.

The House will now stand adjourned to meet on Monday, the 29th January 1951 at One of the Clock.

The Assembly adjourned at Eight of the Clock to meet again on Monday, the 29th January 1951 at One of the Clock.

WD 2915—GPB—500—7-3-51